₹ 4 ಪುಟ: 4 ಸಂಪುಟ: 4 ಸಂಚಿಕೆ 77 newsbelagavi@gmail.com 9900332089 9900332089




# ಬೆಳಗಾವಿ ವರದಿ

ಪ್ರಧಾನ ಸಂಪಾದಕರು: ಸತೀಶ್.ಬಿ.ಜಿ

BELAGAVI VARADI KANNADA DAILY

ಕನ್ನಡ ದಿನಪತ್ರಿಕೆ

Volume : 4 Issue: 77 Sunday, 07, MAY, 2023 RNI: KARKAN/2020/79084 Regn,No:G-2/PMG/KA/NK/BM/139/2021-23 24


# ಕರ್ನಾಟಕದಲ್ಲಿ ಕಳ್ಳ ಸರ್ಕಾರ: ರಾಹುಲ್ ಗಾಂಧಿ

## ಪ್ರಧಾನಿ ಮೋದಿ ಕನ್ನಡಿಗರ ಕಷ್ಟದ ದಿನಗಳಿಗೆ ಆಗಲ್ಲ. ಚುನಾವಣೆ ಬಂದಾಗ ಅಷ್ಟೇ ಕರ್ನಾಟಕಕ್ಕೆ ಆಗಮಿಸುತ್ತಾರೆ: ರಾಗಾ

ಬೆಳಗಾವಿ: ಕರ್ನಾಟಕದಲ್ಲಿ ಇರುವುದು ಕಳ್ಳ ಸರ್ಕಾರ. ಈ ಬಿಜೆಪಿ ಸರ್ಕಾರವನ್ನು ಜನರು ಆಯ್ಕೆ ಮಾಡಿದಲ್ಲ. ಶಾಸಕರನ್ನು ಹಣದಿಂದ ಖರೀದಿಸಿ ಸರ್ಕಾರ ರಚಿಸಿ, ಪ್ರತಿ ಸರ್ಕಾರಿ ಕೆಲಸದಲ್ಲೂ 40 % ಕಮಿಷನ್ ಪಡೆಯುತ್ತಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಾಗ್ದಾಳಿ ನಡೆಸಿದರು.

ಯಮಕನಮರಡಿ ಮತಕ್ಷೇತ್ರದ ಭೂತರಾಮನ ಹಟ್ಟಿಯಲ್ಲಿ ಹಮ್ಮಿಕೊಂಡಿದ್ದ ಬೃಹತ್ ಸಾರ್ವಜನಿಕ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಈ ಸರ್ಕಾರಕ್ಕೆ 40 % ಸರ್ಕಾರ ಎಂದು ಕರೆಯಬೇಕು. ಗುತ್ತಿಗೆದಾರರ ಸಂಘಟನೆ ಅಧ್ಯಕ್ಷರು ಕರ್ನಾಟಕದಲ್ಲಿ ನಡೆಯುತ್ತಿರುವ 40 % ಬಗ್ಗೆ ಪ್ರಧಾನಿ ಮೋದಿ ಅವರಿಗೆ ಪತ್ರ ಬರೆದಿದ್ದರೂ ಇದುವರೆಗೂ ಯಾವುದೇ ಪ್ರತ್ಯುತ್ತರ ಕೊಟ್ಟಿಲ್ಲ.





ಭ್ರಷ್ಟಾಚಾರ ಬಗ್ಗೆ ಮಾತನಾಡುವ ಪ್ರಧಾನಿಯವರು ರಾಜ್ಯದಲ್ಲಿ ತಮ್ಮದೇ ನೇತೃತ್ವದ ಸರ್ಕಾರದ ಭ್ರಷ್ಟಾಚಾರ ಬಗ್ಗೆ ಮೌನ ವಹಿಸಿದ್ದಾರೆಂದು ಟೀಕಿಸಿದರು.

ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಕಳೆದ ಮೂರು ವರ್ಷದಿಂದ ಬಿಜೆಪಿ ಸರ್ಕಾರ 40 % ಕಮಿಷನ್ ಪಡೆದಿದೆ.

ಬಿಜೆಪಿಗೆ 40ರ ಸಂಖ್ಯೆ ತುಂಬ ಇಷ್ಟವಿದ್ದು, 40ರ ಸಂಖ್ಯೆಯ ಮೇಲೆ ಅವರಿಗೆ ಪ್ರೀತಿ ಇದೆ. ಹೀಗಾಗಿ, ಬಿಜೆಪಿಗೆ ಈ ಚುನಾವಣೆಯಲ್ಲಿ ಕರ್ನಾಟಕದ ಜನರು 40 ಸೀಟುಗಳನ್ನು ಮಾತ್ರ ನೀಡಬೇಕು. ಕಾಂಗ್ರೆಸ್‌ಗೆ ಕಡಿಮೆ ಎಂದರೂ 150 ಸೀಟುಗಳನ್ನು ನೀಡಬೇಕು ಎಂದು ಮನವಿ ಮಾಡಿದರು.

ಪ್ರಧಾನಿ ನರೇಂದ್ರ ಮೋದಿ ಚುನಾವಣೆ ಸಮಯದಲ್ಲಿ ರಾಜ್ಯಕ್ಕೆ ಭೇಟಿ ನೀಡುತ್ತಾರೆ. ಕನ್ನಡಿಗರ ಕಷ್ಟದ ದಿನಗಳಲ್ಲಿ ಪ್ರಧಾನಿ ಅವರು ಬರಲ್ಲ.

ಆದರೆ ಈಗ ಮತ ಕೇಳಲು ಬರುವುದು ವಿಪರ್ಯಾಸ, ಯುವಕರ ಭವಿಷ್ಯದ ಬಗ್ಗೆ ಆಸೆ ತೋರಿಸಿ, ಅಧಿಕಾರಕ್ಕೆ ಬಂದರೆ ವರ್ಷಕ್ಕೆ 2 ಕೋಟಿ ಯುವಕರಿಗೆ ಉದ್ಯೋಗ ನೀಡುತ್ತೇನೆ ಎಂದು ಹೇಳಿ ಉದ್ಯೋಗ ಸೃಷ್ಟಿ ಮಾಡಲಿಲ್ಲ, ನಾವು ಸುಳ್ಳು ಭರವಸೆ ನಿಡುವುದಿಲ್ಲ, ಅಧಿಕಾರ ನೀಡಿ ನೋಡಿ. 2.5 ಲಕ್ಷ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಕೇಂದ್ರ, ರಾಜ್ಯ ಬಿಜೆಪಿ ಸರ್ಕಾರ ಅಧಿಕಾರ ಪಡೆದು ದೇಶ, ರಾಜ್ಯವನ್ನು ಲೂಟಿ ಮಾಡುತ್ತಿದೆ.

ಭಯೋತ್ಪಾದನೆ ಬಗ್ಗೆ ಮಾತನಾಡುವ ಬಿಜೆಪಿಗರು ಮಾಡಿದ್ದೇನು..? ಇಂತವರ ಭಯೋತ್ಪಾದನೆಯಿಂದ ನನ್ನ ತಂದೆ, ನನ್ನ ಅಜ್ಜಿಯನ್ನು ಕಳೆದುಕೊಂಡಿದ್ದೇನೆ, ಭಯೋತ್ಪಾದನೆಯಿಂದ ನಮ್ಮ ಕುಟುಂಬ, ನಾನು ನೋವು ಅನುಭವಿಸಿದ್ದೇವೆ ಎಂದರು.

ಬಿಜೆಪಿ ಸರ್ಕಾರ ಜನರಿಂದ ಲೂಟಿ ಮಾಡಿದ ಹಣವನ್ನು, ರೈತರ, ಜನರ, ಬಡವರಿಗೆ ನೀಡುವುದೇ ಕಾಂಗ್ರೆಸ್ ಪಕ್ಷದ ಗುರಿಯಾಗಿದ್ದು, ಅದಕ್ಕಾಗಿಯೇ ನಾವು ಇಂದು ಚುನಾವಣೆ ಮುಂಚೆಯೇ ಐದು ಗ್ಯಾರಂಟಿಗಳನ್ನು ನೀಡಿದ್ದು, ನಾನು ಅಧಿಕಾರಕ್ಕೆ ಬಂದ ಐದು ದಿನಗಳಲ್ಲಿ ಐದು ಗ್ಯಾರಂಟಿಗಳನ್ನು ಈಡೇರಿಸುತ್ತೇವೆ. ಅವುಗಳಿಂದ ಜನ ಕಲ್ಯಾಣ ಹೇಗೆ ಆಗುತ್ತೆ ಎಂಬುವುದನ್ನು ನೀವೇ ಮುಂದೆ ನೋಡುವಿರಿ ಎಂದು ತಿಳಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ, ಶಾಸಕ ಸತೀಶ್ ಜಾರಕಿಹೊಳಿಯವರು ಜನ ಸಾಮಾನ್ಯರ, ಹಿಂದುಳಿದವರು ಸೇ–ರಿದಂತೆ ಎಲ್ಲ ವರ್ಗದವರ ಬಗ್ಗೆ ಕಳಕಳಿ ಇರುವ ನಾಯಕ. ಇಂತ ನಾಯಕ, ನಿಮ್ಮ ಸಮಸ್ಯೆ ಗೆ ಸದಾ ಸ್ಪಂದಿಸುವ ಸತೀಶ್ ಅವರನ್ನು ಹೆಚ್ಚಿನ ಅಂತರದಿಂದ ಗೆಲ್ಲಿಸಬೇಕೆಂದು ಹೇಳಿದರು.

## ಅಧಿಕಾರ ಮುಖ್ಯ ಅಲ್ಲ: ಕುಮಾರಸ್ವಾಮಿ



ಕೆ.ಆರ್.ಪೇಟೆ (ಮಂಡ್ಯ ಜಿಲ್ಲೆ): 'ನಾನು ಅಧಿಕಾರಕ್ಕಾಗಿ ಹೋರಾಟ ಮಾಡುತ್ತಿಲ್ಲ, ನಮ್ಮ ಕುಟುಂಬ ಈಗಾಗಲೇ ಅದನ್ನು ಅನುಭವಿಸಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಪ್ರತಿಪಾದಿಸಿದರು.

ಪ್ರಚಾರ ಸಭೆಯಲ್ಲಿ ಮಾತನಾಡಿ, 'ನಾನು 2018ರಲ್ಲಿ ಮುಖ್ಯಮಂತ್ರಿಯಾಗಲು ಮಂಡ್ಯ ಜಿಲ್ಲೆಯ ಜನ ಏಳಕ್ಕೆ ಏಳೂ ಕ್ಷೇತ್ರಗಳಲ್ಲಿ ಪಕ್ಷವನ್ನು ಗೆಲ್ಲಿಸಿ ಶಕ್ತಿ ತುಂಬಿದ್ದರು. ಈ ಬಾರಿಯೂ 123 ಸ್ಥಾನಗಳ ಗುರಿ ಮುಟ್ಟಲು ಸಹಕಾರ ಬೇಕು. ಜಿಲ್ಲೆಯ ಜನ ಪ್ರೀತಿ ಕೊಟ್ಟರೆ ಮೇಲೆತ್ತಿ ಮೆರೆಸುತ್ತಾರೆ, ಪ್ರೀತಿ ಇಲ್ಲವೆಂದರೆ ನೆಲಕ್ಕೆ ಹಾಕಿ ತುಳಿಯುತ್ತಾರೆ' ಎಂದರು.

ಅಧಿಕಾರಕ್ಕಾಗಿ ರೋಡ್ ಶೋ ನಡೆಸುತ್ತಿರುವ ಕಾಂಗ್ರೆಸ್, ಬಿಜೆಪಿಯ ರಾಷ್ಟ್ರೀಯ ಮುಖಂಡರು, ರೈತರು ಆತ್ಮಹತ್ಯೆ ಮಾಡಿಕೊಂಡಾಗ ಎಲ್ಲಿದ್ದರು? ಆತ್ಮಹತ್ಯೆ ಮಾಡಿಕೊಂಡವರ ಮನೆಗೆ ತೆರಳಿ ಮೊದಲು ಸಾಂತ್ವನ ಹೇಳಿದ್ದು ದೇವೇಗೌಡರು' ಎಂದರು.

ದೇವೇಗೌಡರ ಆರೋಗ್ಯ ಸುಧಾರಿಸಿದ್ದು ಮೂರ್ನಾಲ್ಕು ದಿನಗಳಿಂದ ನನ್ನೊಂದಿಗೆ ಓಡಾಡುತ್ತಿದ್ದಾರೆ. ಅವರು ಪ್ರಚಾರ ಮಾಡುತ್ತಾರೆಂದು ಕೊಂಡಿರಲಿಲ್ಲ. ವಿಶ್ರಾಂತಿಗಾಗಿ ಮನೆಯಲ್ಲಿ ಉಳಿದುಕೊಂಡಿದ್ದರಿಂದ ಆರೋಗ್ಯ ಹದಗೆಟ್ಟಿತ್ತು. ಮೈಸೂರಿನ ಪಂಚರತ್ನ ಯಾತ್ರೆ ಸಮಾರೋಪದ ಬಳಿಕ, ನನ್ನ ಏಕಾಂಗಿ ಹೋರಾಟವನ್ನು ಗಮನಿಸುತ್ತಿರುವ ಅವರು, ನನ್ನ ಮೇಲಿನ ಒತ್ತಡ ಕಡಿಮೆ ಮಾಡಲೆಂದೇ ಪ್ರಚಾರಕ್ಕೆ ಬರುತ್ತಿದ್ದಾರೆ' ಎಂದರು.


'2 ಬಾರಿ ಹೃದಯ ಶಸ್ತ್ರಚಿಕಿತ್ಸೆಯಾದರೂ ನಾನು ದಿನಕ್ಕೆ 16 ಗಂಟೆ ಓಡಾಡುತ್ತಿದ್ದೇನೆ. ಈ ಹೋರಾಟ ಅಧಿಕಾರಕ್ಕಾಗಿ ಅಲ್ಲ, ಬಡವರ ಸೇವೆಗಾಗಿ. ರಾಜಕಾರಣದಲ್ಲಿ ನನ್ನನ್ನು ಕೆಲವರು ಕೆಟ್ಟದಾಗಿ ನಡೆಸಿಕೊಂಡಿದ್ದಾರೆ. ಚರ್ಮವೊಂದನ್ನು ಸುಲಿದಿಲ್ಲ, ಎಲ್ಲವನ್ನೂ ಸುಲಿದು ಆಗಿದೆ' ಎಂದರು.

## ಕ್ಷೇತ್ರಕ್ಕೆ ಯೋಜನೆಗಳ ಪಟ್ಟಿ ಬಿಡುಗಡೆ ಮಾಡಿದ ಲಕ್ಷ್ಮೀ ಹೆಬ್ಬಾಳಕರ್

ಬೆಳಗಾವಿ: 2018ರ ಚುನಾವಣೆ ವೇಳೆ ನೀಡಿದ್ದ ಭರವಸೆಗಳಲ್ಲಿ ಶೇ 98ರಷ್ಟನ್ನು ಈಡೇರಿಸಿ ವಚನ ಪೂರ್ಣಗೊಳಿಸಿದ್ದ ಬೆಳಗಾವಿ ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಶಾಸಕಿ ಲಕ್ಷ್ಮೀ ಹೆಬ್ಬಾಳಕರ್, ಮುಂದಿನ ಅವಧಿಯಲ್ಲಿ ತಮ್ಮ ಮುಂದಿರುವ ಯೋಜನೆಗಳ ಪಟ್ಟಿ ಬಿಡುಗಡೆ ಮಾಡಿದ್ದಾರೆ.

ರಾಜ್ಯ ಕಾಂಗ್ರೆಸ್ ನೀಡಿರುವ ಗ್ಯಾರಂಟಿ ಯೋಜನೆಗಳ ಜೊತೆಗೆ ಲಕ್ಷ್ಮೀ ಹೆಬ್ಬಾಳಕರ್ ತಮ್ಮ ಕ್ಷೇತ್ರಕ್ಕೆ ತಾವು ನೀಡುವ ಕೊಡುಗೆಗಳ ಪಟ್ಟಿ ಮಾಡಿದ್ದಾರೆ. ತನ್ಮೂಲಕ ಕ್ಷೇತ್ರವನ್ನು ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುವ ತಮ್ಮ ಮಹತ್ವಾಕಾಂಕ್ಷೆಯನ್ನು ಬಿಚ್ಚಿಟ್ಟಿದ್ದಾರೆ.

ಶಿಕ್ಷಣದಲ್ಲಿ ಹಿಂದುಳಿದಿರುವ ಬೆಳಗಾವಿ ಗ್ರಾಮೀಣ ಕ್ಷೇತ್ರಕ್ಕೆ ಸರಕಾರಿ ಎಂಜಿನಿಯರಿಂಗ್ ಕಾಲೇಜು ತರುವುದಾಗಿ ಲಕ್ಷ್ಮೀ ಹೆಬ್ಬಾಳಕರ್ ಘೋಷಿಸಿದ್ದಾರೆ. ಅಲ್ಲದೆ ಸರಕಾರಿ ಐಟಿಐ ಕಾಲೇಜು ಮಂಜೂರು ಮಾಡಿಸುವುದಾಗಿಯೂ ಭರವಸೆ



ನೀಡಿದ್ದಾರೆ. ಕ್ಷೇತ್ರಕ್ಕೆ ಮುರಾರ್ಜಿ ವಸತಿ ಶಾಲೆ, ರಾಣಿ ಚನ್ನಮ್ಮ ವಸತಿ ಶಾಲೆಗಳನ್ನು ಮಂಜೂರು ಮಾಡಿಸುವು ದಾಗಿಯೂ ಘೋಷಿಸಿದ್ದಾರೆ.

ಕ್ಷೇತ್ರದಲ್ಲಿ 100 ಹಾಸಿಗೆಗಳ ತಾಯಿ – ಮಗುವಿನ ಆಸ್ಪತ್ರೆ ನಿರ್ಮಾಣ ಮಾಡುವುದಾಗಿ ಲಕ್ಷ್ಮೀ ಹೆಬ್ಬಾಳಕರ್ ತಿಳಿಸಿದ್ದಾರೆ. ಕ್ಷೇತ್ರದ ಎಲ್ಲ 112 ಕೆರೆಗಳನ್ನು ತುಂಬುವ ಯೋಜನೆ ತರುವುದಾಗಿ ಘೋಷಿಸಿದ್ದಾರೆ. ಬಾಗೇವಾಡಿ ಮತ್ತು ಉಚಗಾಂವ್ ನಲ್ಲಿ ಉತ್ತಮ ಗುಣಮಟ್ಟದ ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಾಣ ಮಾಡುವುದಾಗಿ ಭರವಸೆ ನೀಡಿದ್ದಾರೆ.

ಗ್ರಾಮೀಣ ಕ್ಷೇತ್ರದಲ್ಲಿ ಜವಳಿ ಪಾರ್ಕ್ ನಿರ್ಮಾಣ ಮಾಡುವುದಾಗಿ ಪ್ರಕಟಿಸಿರುವ ಅವರು, ಕ್ಷೇತ್ರದಲ್ಲಿ ಓಡಾಡುವ ಹಳೆಯ ಬಸ್ ಗಳನ್ನು ಬದಲಿಸಿ ಸಂಪೂರ್ಣ ಹೊಸ ಬಸ್ ಗಳನ್ನು ಓಡಿಸುವ ವ್ಯವಸ್ಥೆ ಮಾಡುವುದಾಗಿ ತಿಳಿಸಿದ್ದಾರೆ. ಕ್ಷೇತ್ರದಲ್ಲಿ ಇಂಡಸ್ಟ್ರಿಯಲ್ ಕಾ–ರಿಡಾರ್ ನಿರ್ಮಾಣ, ಕೌಶಲ್ಯ ತರಬೇತಿ ಕೇಂದ್ರ, ಯುವತಿಯ–ರಿಗೆ ನಾಯಕತ್ವ ತರಬೇತಿ, ಸ್ವಯಂ ಉದ್ಯೋಗ ಕೈಗೊಳ್ಳುವವರಿಗೆ ಸಂಪೂರ್ಣ ನೆರವು ನೀಡುವುದಾಗಿ ಲಕ್ಷ್ಮೀ ಹೆಬ್ಬಾಳಕರ್ ಭರವಸೆ ನೀಡಿದ್ದಾರೆ.

ಕೊಟ್ಟ ಮಾತಿನಂತೆ ನಡೆದುಕೊಂಡು ಕ್ಷೇತ್ರದ ಮನೆಮಗಳೆನಿಸಿಕೊಂಡಿರುವ ಲಕ್ಷ್ಮೀ ಹೆಬ್ಬಾಳಕರ್, ಕ್ಷೇತ್ರವನ್ನು ಸಮಗ್ರ ಅಭಿವೃದ್ಧಿಪಡಿಸುವ ಕನಸನ್ನು ಕಟ್ಟಿಕೊಂಡಿದ್ದು, ಅದಕ್ಕೆ ಪೂರಕವಾಗಿ ಯೋಜನೆಗಳನ್ನು ಘೋಷಿಸಿದ್ದಾರೆ. ಹಿಂದಿನ ಅವಧಿಯಲ್ಲಿ ವಚನ ಪೂರೈಸಿರುವುದರಿಂದ ಮುಂದಿನ ಅವಧಿಯಲ್ಲೂ ಅವರು ಖಂಡಿತ ಭರವಸೆಗಳನ್ನು ಈಡೇರಿಸುತ್ತಾರೆ ಎನ್ನುವ ವಿಶ್ವಾಸವನ್ನು ಮತದಾರರು ಅವರ ಮೇಲಿಟ್ಟಿದ್ದಾರೆ.

**ಘೋಷಿಸಿರುವ ಯೋಜನೆಗಳ ಪಟ್ಟಿ**

ಸರಕಾರಿ ಎಂಜಿನಿಯರಿಂಗ್ ಕಾಲೇಜು
ಸರಕಾರಿ ಐಟಿಐ ಕಾಲೇಜು
ಮುರಾರ್ಜಿ ದೇಸಾಯಿ ವಸತಿ ಶಾಲೆ
ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ
100 ಹಾಸಿಗೆಗಳ ತಾಯಿ –ಮಗುವಿನ ಆಸ್ಪತ್ರೆ
ಕ್ಷೇತ್ರದ ಎಲ್ಲ 112 ಕೆರೆಗಳ ಭರ್ತಿ
2 ಕಡೆ ಗುಣಮಟ್ಟದ ಆರೋಗ್ಯ ಕೇಂದ್ರ
ಜವಳಿ ಪಾರ್ಕ್ ನಿರ್ಮಾಣ
ಕ್ಷೇತ್ರಕ್ಕೆ ಸಂಪೂರ್ಣ ಹೊಸ ಬಸ್
ಇಂಡಸ್ಟ್ರಿಯಲ್ ಕಾರಿಡಾರ್, ಕೌಶಲ್ಯ ತರಬೇತಿ ಕೇಂದ್ರ ಇತ್ಯಾದಿ.

## ಜಗದೀಶ್ ಶೆಟ್ಟರ್ ಪರ ಮತಯಾಚನೆ ಮಾಡಿದ್ದು ಖುಷಿ ತಂದಿದೆ: ನಟ ಶಿವರಾಜಕುಮಾರ



ಧಾರವಾಡ: ಇವತ್ತು ಜಗದೀಶ್ ಶೆಟ್ಟರ್ ಪರ ಮತಯಾಚನೆ ಮಾಡಿದ್ದು ಖುಷಿ ತಂದಿದೆ. ರೋಡ್‌ಶೋ ವೇಳೆ ಉತ್ತಮ ಬೆಂಬಲ ವ್ಯಕ್ತವಾಗಿದೆ ಎಂದು ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಹೇಳಿದರು.

ನಗರದಲ್ಲಿಂದು ಬಿಜೆಪಿ ಅಭ್ಯರ್ಥಿ ಜಗದೀಶ್ ಶೆಟ್ಟರ್ ಪರ ರೋಡ್ ಶೋ ನಡೆಸಿ ಮಾತನಾಡಿದ ಅವರು, ಇವತ್ತು ರೋಡ್‌ಶೋನಲ್ಲಿ ಇಷ್ಟೊಂದು ಜನ ಬಂದಿದ್ದಾರೆ. ಇವರೆಲ್ಲ ಟ್ರೋಲ್ ಮಾಡಲಿಕ್ಕೆ ಬಂದಿದ್ದಾರೇನೂ. ಇಲ್ಲಿ ಬಂದವರೆಲ್ಲ ಕಾಂಗ್ರೆಸ್‌ನವರಲ್ಲ, ಬಿಜೆಪಿಯವರು ಇದ್ದಾರೆ, ಪಕ್ಷೇತರರು ಇದ್ದಾರೆ. ಇವತ್ತು ನಮ್ಮ ಕರ್ತವ್ಯ ನಾವು ಮಾಡಲಿಕ್ಕೆ ಬಂದಿದ್ದೇವೆ, ಇದಕ್ಕೆ ಜನರು ಉತ್ತಮ ಪ್ರೀತಿ ತೋರಿಸುತ್ತಿದ್ದಾರೆ ಎಂದರು. ಇದಕ್ಕೂ ಮೊದಲು ಕಾಂಗ್ರೆಸ್ ಅಭ್ಯರ್ಥಿ ಜಗದೀಶ್ ಶೆಟ್ಟರ್ ಪರ ನಟ ಶಿವಣ್ಣ ಭರ್ಜರಿ ರೋಡ್ ಶೋ ನಡೆಸಿದರು. ಹುಬ್ಬಳ್ಳಿಯ ನಾಗಶೆಟ್ಟಿಕೊಪ್ಪದಿಂದ ಬೃಹತ್ ರೋಡ್ ಶೋ ನಡೆಸಿದರು. ನಾಗಶೆಟ್ಟಿಕೊಪ್ಪ ದಿಂದ ರಾಮನಗರ ವರೆಗೂ ಶಿವಣ್ಣ ರೋಡ್ ಶೋ ನಲ್ಲಿ ಅಭೂತಪೂರ್ವ ಸ್ವಾಗತ ನೀಡಿದರು. ಪಟಾಕಿ ಸಿಡಿಸಿ, ಹ್ಯಾಟ್ರಿಕ್ ಹೀರೋ ಗೆ ಅಭಿಮಾನಿಗಳು ಸ್ವಾಗತಿಸಿದರು. ಜನರತ್ತ ಕೈಬೀಸಿ ಹಸ್ತಕ್ಕೆ ಮತ ನೀಡುವಂತೆ ಶಿವಣ್ಣ ಮನವಿ ಮಾಡಿದರು. ಜಗದೀಶ್ ಶೆಟ್ಟರ್ ಪರವಾಗಿ ಡಾ . ಶಿವರಾಜಕುಮಾರ್ ಮತ ಬೇಟೆ ನಡೆಸಿದರು.

## ಬಿಜೆಪಿ ಅಭ್ಯರ್ಥಿ ಪರ ಮತದಾರರಿಗೆ ಹಂಚಲು ತಂದಿದ್ದ ಕೋಟಿ ಕೋಟಿ ಹಣ ಜಪ್ತಿ

ಬೆಂಗಳೂರು: ಬೂತ್ ಲೀಡರ್ಗಳಿಗೆ ಹಂಚಲು ತಂದಿದ್ದ 7 ಲಕ್ಷದ 60 ಸಾವಿರ ನಗದನ್ನು ಪೊಲೀಸರು ವಶಪಡಿಸಿಕೊಂಡ ಘಟನೆ ಶಿವಾಜಿನಗರದಲ್ಲಿ ನಡೆದಿದೆ. ಶಿವಾಜಿನಗರದಲ್ಲಿ ಹಣ ಹಂಚುತ್ತಿದ್ದ ಮಾಹಿತಿ ಆಧರಿಸಿ ಫ್ಲೈಯಿಂಗ್ ಸ್ಕ್ವಾಡ್ ಹಾಗೂ ಪೊಲೀಸರು ದಾಳಿ ನಡೆಸಿದ್ದು ಲಕ್ಷ ಲಕ್ಷ ಹಣ ಪತ್ತೆಯಾಗಿದೆ. ಹಣವನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.ಬಿಜೆಪಿ ಅಭ್ಯರ್ಥಿ ಚಂದ್ರು ಪರ ಬೂತ್ ಲೀಡರ್ಗಳಿಗೆ ತಲಾ 10 ಸಾವಿರದಂತೆ ಹಣ ಹಂಚಲು ನಗದು ತಂದಿರುವುದಾಗಿ ಮಾಹಿತಿ ಸಿಕ್ಕ ನಂತರ ದಾಳಿ ನಡೆಸಿದ ಅಧಿಕಾರಿಗಳಿಗೆ ಇಬ್ಬರು ಹಣದ ಸಮೇತ ಸಿಕ್ಕಿಬಿದ್ದಿದ್ದಾರೆ.

## ಐಪಿಎಲ್ ನಲ್ಲಿ ವಿರಾಟ್ ಕೊಹ್ಲಿ ವಿಶೇಷ ಸಾಧನೆ

ನವದೆಹಲಿಯ ಫಿರೋಜ್ ಷಾ ಕೋಟ್ಲಾದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿರಾಟ್ ಕೊಹ್ಲಿ 7000 ಐಪಿಎಲ್ ರನ್ ಗಳಿಸಿದ ಮೊದಲ ಬ್ಯಾಟರ್ ಎನಿಸಿಕೊಂಡರು.

34 ವರ್ಷದ ಬ್ಯಾಟರ್ ತಮ್ಮ 225 ನೇ ಐಪಿಎಲ್ ಇನ್ನಿಂಗ್ಸ್‌ನಲ್ಲಿ ಅಕ್ಷರ್ ಪಟೇಲ್ ವಿರುದ್ಧ ಕಟ್ ಶಾಟ್‌ನೊಂದಿಗೆ 7000 ರನ್ ಗಡಿಯನ್ನು ತಲುಪಿದರು.

ಐಪಿಎಲ್‌ನಲ್ಲಿ ಸಾರ್ವಕಾಲಿಕ ರನ್ ಗಳಿಸಿದವರ ಪಟ್ಟಿಯಲ್ಲಿ ಕೊಹ್ಲಿ ಎರಡನೇ ಸ್ಥಾನದಲ್ಲಿರುವ ಶಿಖರ್ ಧವನ್‌ಗಿಂತ ಸಾಕಷ್ಟು ಮುಂದಿದ್ದಾರೆ, ಎಡಗೈ ಬ್ಯಾಟರ್ ಪ್ರಸ್ತುತ 6536 ರನ್‌ಗಳಿಸಿದ್ದಾರೆ. 2008 ರ ಮೊದಲ ಆವೃತ್ತಿಯಿಂದ ಪ್ರಾರಂಭಿಸಿ ತಮ್ಮ IPL ವೃತ್ತಿಜೀವನದುದ್ದಕ್ಕೂ RCB ಯನ್ನು ಪ್ರತಿನಿಧಿಸಿರುವ ಕೊಹ್ಲಿ, ಪಂದ್ಯಾವಳಿಯಲ್ಲಿ



36.59 ರ ಸರಾಸರಿಯಲ್ಲಿ 49 ಅರ್ಧಶತಕಗಳು ಮತ್ತು ಐದು ಶತಕಗಳನ್ನು ಹೊಂದಿದ್ದಾರೆ.

ಬಲಗೈ ಬ್ಯಾಟರ್ ಐಪಿಎಲ್‌ನ ಒಂದೇ ಆವೃತ್ತಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ದಾಖಲೆಯನ್ನು ಹೊಂದಿದ್ದಾರೆ, ಅವರು 2016 ರಲ್ಲಿ ಖಅಃ ಗಾಗಿ ಸಂಗ್ರಹಿಸಿದ 973 ರನ್‌ಗಳಿಸಿದ್ದರು. ಈ ಪಂದ್ಯಾವಳಿಯಲ್ಲಿ ಆರೆಂಜ್ ಕ್ಯಾಪ್ ಪಡೆದಿದ್ದರು.



## ಐಟಿ ರೇಡ್: 20 ಕೋಟಿ ಹಣ ವಶ

ಬೆಂಗಳೂರು: ಬೆಂಗಳೂರು ಮತ್ತು ಮೈಸೂರಿನ ಹಲವು ಸ್ಥಳಗಳಲ್ಲಿ ಐಟಿ ಅಧಿಕಾರಿಗಳು ಶುಕ್ರವಾರ ದಾಳಿ ನಡೆಸಿದ್ದು, ಸುಮಾರು 20 ಕೋಟಿ ಹಣ ವಶಕ್ಕೆ ಪಡೆದಿದ್ದಾರೆ.

ವಿಧಾನ ಸಭಾ ಚುನಾವಣಾಗೆ ಸ್ಪರ್ಧಿಸಿರುವ ಅಭ್ಯರ್ಥಿಗಳಿಗೆ ಫಂಡ್ ಮಾಡ್ತಿದ್ದ ಫೈನಾನ್ಷಿಯರ್‌ಗಳ ಮನೆ ಮೇಲೆ ಐಟಿ ಅಧಿಕಾ–ರಿಗಳು ಏಕಾಏಕಿ ದಾಳಿ ನಡೆಸಿದ್ದಾರೆ.

ಕೆಲವು ಫೈನಾನ್ಷಿಯರ್‌ಗಳು ಬೇನಾಮಿ ಗಳಾಗಿರುವ ಹಿನ್ನೆಲೆಯಲ್ಲಿ ಏಕಕಾಲಕ್ಕೆ ದಾಳಿ ನಡೆದಿದೆ.

ಬೆಂಗಳೂರು, ಮೈಸೂರು ಭಾಗದಲ್ಲಿ ದಾಳಿ ನಡೆದಿದ್ದು, 15 ಕೋಟಿ ರೂ.ಗಿಂತಲೂ ಹೆಚ್ಚಿನ ಪ್ರಮಾಣದ ನಗದು ಹಾಗೂ 5 ಕೋಟಿ ಬೆಲೆಬಾಳುವ ಚಿನ್ನಾಭರಣ ಜಪ್ತಿ ಮಾಡಲಾಗಿದೆ.

ಬೆಂಗಳೂರಿನ ಶಾಂತಿನಗರ, ಕಾಕ್ಸ್‌ಟೌನ್, ಶಿವಾಜಿನಗರ, ಕನಿಂಗ್ಹ್ಯಾಮ್ ರಸ್ತೆ, ಸದಾಶಿವನಗರ, ಕುಮಾರಪಾರ್ಕ್ ವೆಸ್ಟ್ ಸೇ–ರಿದಂತೆ ಹಲವು ಕಡೆಗಳಲ್ಲಿ ದಾಳಿ ನಡೆದಿದೆ. ಶುಕ್ರವಾರ ಬೆಳಗ್ಗೆ ದಾಳಿ ನಡೆಸಿರುವ ಅಧಿಕಾರಿಗಳು ಹಣವನ್ನ ವಶಕ್ಕೆ ಪಡೆದುಕೊಂಡಿದ್ದು, ತನಿಖೆ ಕೈಗೊಂಡಿದ್ದಾರೆ.






## ಬೆಳಗಾವಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅದ್ಧೂರಿ ರೋಡ್ ಶೋ

ಬೆಳಗಾವಿ: ಬರುವ ಚುನಾವಣೆ ಕೇವಲ ಓರ್ವ ಶಾಸಕನನ್ನು ಮಂತ್ರಿಯನ್ನು ಆಯ್ಕೆ ಮಾಡುವ ಚುನಾವಣೆ ಅಲ್ಲ ಬರುವ ಚುನಾವಣೆ ಕರ್ನಾಟಕದ ಮುಂದಿನ ಭವಿಷ್ಯವನ್ನು ಭದ್ರ ಪಡಿಸುವ ಚುನಾವಣೆಯಾಗಿದೆ ಆದ್ದರಿಂದ ಕರ್ನಾಟಕದ ಮತಬಾಂಧವರು ವಿಶೇಷವಾಗಿ ವಿಶೇಷವಾಗಿ ಉತ್ತರ ವಿಧಾನಸಭಾ ಕ್ಷೇತ್ರದ ಭಾರತೀಯ ಜನತಾ ಪಾರ್ಟಿ ಅಭ್ಯರ್ಥಿ ಡಾಕ್ಟರ್ ರವಿ ಪಾಟೀಲ್ ಪರ ಮತ ಚಲಾಯಿಸಿ ಬಿಜೆಪಿ ಸರಕಾರವನ್ನು ರಾಜ್ಯದಲ್ಲಿ ಮರು ಸ್ಥಾಪಿಸಬೇಕೆಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಕರೆ ನೀಡಿದರು.

ಬೆಳಗಾವಿ ನಗರದ ಗಣಪತಿಯಲ್ಲಿ ಬೃಹತ್ ರೋಡ್ ಶೋ ಹಾಗೂ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅಮಿತ್ ಶಾ ಕಾಂಗ್ರೆಸ್ ಪಕ್ಷವನ್ನು ದೇಶದಿಂದ ಹೊರಹಾಕಬೇಕಾಗಿದೆ ಹಾಗೂ ಭಾರತೀಯ ಜನತಾ ಪಕ್ಷದ ಸುಭದ್ರ ಸರ್ಕಾರವನ್ನು ದೇಶದಲ್ಲಿ ಹಾಗೂ ರಾಜ್ಯದಲ್ಲಿ ಸ್ಥಾಪಿಸಬೇಕಿದೆ ಎಂದು ಹೇಳಿದರು. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಈಗಾಗಲೇ ಧರ್ಮದ ಹೆಸರಿನಲ್ಲಿ ನೀಡಿದ ಮೀಸಲಾತಿಯನ್ನು ತೆಗೆದುಹಾಕಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಹಾಗೂ ಲಿಂಗಾಯತರಿಗೆ ಮೀಸಲಾತಿ ಹೆಚ್ಚಿಸಿ



ನ್ಯಾಯ ಒದಗಿಸಲಾಗಿದೆ. ಜನರ ಅಶ್ವತರಿಗಳಿಗೆ ಸ್ಪಂದಿಸಿ , ಜನಪರ ಕೆಲಸ ನಿರ್ವಹಿಸುತ್ತಿರುವ ಬಿಜೆಪಿ ಸರ್ಕಾರವನ್ನು ಮರು ಸ್ಥಾಪಿಸಲು ಮತದಾರರು ಸನ್ನದ್ಧರಾಗಬೇಕಾಗಿದೆ ಎಂದು ಹೇಳಿದರು.

ಬೆಳಗಾವಿ ಉತ್ತರ ವಿಧಾನಸಭಾ ಕ್ಷೇತ್ರ ಹಾಗೂ ಬೆಳಗಾವಿ ಜಿಲ್ಲೆ ಭಾರತೀಯ ಜನತಾ ಪಕ್ಷದ ಕೋಟೆಯಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷದ ಶಾಸಕರು ಆರಿಸಿ ಬರಬೇಕಾಗಿದೆ.ಜಿಲ್ಲೆಯಲ್ಲಿ ಕಂಡುಬಂದ ಅಭೂತಪೂರ್ವ ಜನ ಬೆಂಬಲ ನೋಡಿದರೆ ಭಾರತೀಯ ಜನತಾ ಪಕ್ಷ 18 ವಿಧಾನಸಭಾ ಕ್ಷೇತ್ರಗಳಲ್ಲಿ 16 ಸ್ಥಾನಗಳನ್ನು ಗೆಲ್ಲುವುದು ನಿಶ್ಚಿತವಾಗಿದೆ ಎಂದು ಹೇಳಿದರು.ಈ ಸಂದರ್ಭದಲ್ಲಿ ಮತದಾರರಿಗೆ ಕರೆ ನೀಡಿದ ಅಮಿತ್ ಷಾ ತಾವು ವಾಪಸ್ ಹೋದ ಬಳಿಗೆ ಪ್ರತಿಯೊಬ್ಬರು ತಮ್ಮ ಸಂಬಂಧಿಕರು ಸ್ನೇಹಿತರು ಬಂಧುಗಳನ್ನು ಭೇಟಿ ಮಾಡಿ ಕಮಲ ಚಿಹ್ನೆಯ ಪರ ಮತದಾನ ಮಾಡುವಂತೆ ಅವರನ್ನು ಉತ್ತೇಜಿಸಬೇಕು ಎಂದು ಹೇಳಿದರು.

2024ರಲ್ಲಿ ದೇಶ ಮತ್ತೆ ಸಾರ್ವತ್ರಿಕ ಚುನಾವಣೆಯನ್ನು ಎದುರಿಸಲಿದೆ ದೇಶದಲ್ಲಿ ಪುನಹ ಬಲಾಢ್ಯ ನರೇಂದ್ರ ಮೋದಿ ನೇತೃತ್ವದ ಸರ್ಕಾರವನ್ನು ಸ್ಥಾಪಿಸುವತ್ತ ಸನ್ನದ್ಧರಾಗಬೇಕಿದೆ ಎಂದು ಹೇಳಿದರು.

ಸದ್ಯ ಕರ್ನಾಟಕ ವಿಧಾನಸಭೆಗೆ ಚುನಾವಣೆ ನಡೆಯುತ್ತಿದ್ದು ಬೆಳಗಾವಿ ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ ಭಾರತೀಯ ಜನತಾ ಪಾರ್ಟಿ ಅಭ್ಯರ್ಥಿ ಡಾಕ್ಟರ್ ರವಿ ಪಾಟೀಲ್ ಪರ ಮತದಾರರು ಮತ ಚಲಾಯಿಸಿ ಪ್ರಚಂಡ ಬಹುಮತದಿಂದ ಡಾಕ್ಟರ್ ರವಿ ಪಾಟೀಲ್ ಅವರನ್ನು ಆರಿಸಿ ತರಬೇಕು ಎಂದು ವಿನಂತಿಸಿದರು.

ಅಭ್ಯರ್ಥಿ ಡಾಕ್ಟರ್ ರವಿ ಪಾಟೀಲ್ ಮಾತನಾಡಿ ಮೇ 10 ರ ಚುನಾವಣೆಯಲ್ಲಿ ಎಲ್ಲರೂ ಭಾಗಿಯಾಗಿ ತಮ್ಮ ಆತ್ಯ ಅಮೂಲ್ಯ ಮತವನ್ನು ಭಾರತೀಯ ಜನತಾ ಪಕ್ಷದ ಅಭ್ಯರ್ಥಿಯಾದ ತಮಗೆ ನೀಡಬೇಕೆಂದು ವಿನಮ್ರವಾಗಿ ವಿನಂತಿಸಿದರು. ಕ್ಷೇತ್ರದ ಜನ ತೋರಿದ ಪ್ರೀತಿ ವಿಶ್ವಾಸಕ್ಕೆ ಅಭಾರಿಯಾಗಿದ್ದೇನೆ ಎಂದು ತಿಳಿಸಿದರು.

# ಕನ್ನಡ ಧ್ವಜಕ್ಕೆ ಮಾನ್ಯತೆ ನೀಡಲು ಸಿದ್ದರಾಮಯ್ಯ ಒತ್ತಾಯ

ಮೈಸೂರು: ಪ್ರಧಾನಿ ನರೇಂದ್ರ ಮೋದಿಯವರೇ, ನೀವು ಕನ್ನಡ ಭಾಷೆಯನ್ನು ನಿಮ್ಮ ಭಾಷಣಗಳಲ್ಲಿ ಬಳಸುವ ಮೂಲಕ ಕನ್ನಡ ನಾಡಿನ ಮಗನಾಗಲು ಪ್ರಯತ್ನಿಸುತ್ತಿದ್ದೀರಿ. ಅದು ಸರಿಯಷ್ಟೇ. ಆದರೆ, ಕನ್ನಡ ರಾಜ್ಯಧ್ವಜ–ಕ್ಕೆ ನಿಮ್ಮ ನೇತೃತ್ವದ ಕೇಂದ್ರ ಸರ್ಕಾರ ಮಾನ್ಯತೆ ಕೊಡುತ್ತದೆಯೇ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರಧಾನಿ ನರೇಂದ್ರ ಮೋದಿಯವರನ್ನು ಕೆಣಕಿದ್ದಾರೆ.

ಮೈಸೂರಿನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಿದ್ದರಾಮಯ್ಯ, ಪ್ರಧಾನಿಯವರು ಕರ್ನಾಟಕಕ್ಕೆ ಹಲವಾರು ಬಾರಿ ಬಂದು ಹೋಗುತ್ತಿದ್ದಾರೆ. ಹಾಗೆ ಬಂದಾಗಲೆಲ್ಲಾ ಅವರು ಜನರನ್ನುದ್ದೇಶಿಸಿ ಭಾಷಣ ಮಾಡುತ್ತಿದ್ದು, ಆಯಾ ಪ್ರಾಂತ್ಯಗಳಲ್ಲಿರುವ ಕನ್ನಡದ ನುಡಿಗಟ್ಟುಗಳು, ಕನ್ನಡತನದ ವಿಶೇಷತೆಗಳನ್ನು ತಮ್ಮ ಭಾಷಣದಲ್ಲಿ ತುಂಬಲು ಪ್ರಯತ್ನಿಸುತ್ತಿದ್ದಾರೆ. ಇದು ನಿಜವಾಗಿಯೂ ಸ್ವಾಗತಾರ್ಹ ಎಂದರು.

ಅಸಲಿಗೆ ಪ್ರಧಾನಿಯವರು ಕನ್ನಡದ ಪದಗಳನ್ನು ತಪ್ಪಾಗಿ ಉಚ್ಚರಿಸುತ್ತಾರೆ. ಪರವಾಗಿಲ್ಲ.

ಆದರೂ ಅವರ ಕನ್ನಡ ಮಾತಾಡುವ ಪ್ರಯತ್ನವನ್ನು ನಾನು ಸ್ವಾಗತಿಸುತ್ತೇನೆ. ಅವರು ಕನ್ನಡ ಮಾತನಾಡುವ ಮೂಲಕ ಕನ್ನಡದ ಮಗನಾಗುವುದಕ್ಕೆ ಪ್ರಯತ್ನಿಸುತ್ತಿದ್ದಾರೆ.

ಅದೂ ಸಹ ಸ್ವಾಗತಾರ್ಹವೇ. ಆದ–'ರೆ, ಕೇವಲ ಕನ್ನಡ ಮಗನಾಗಲು ಪ್ರಯತ್ನಪಟ್ಟರೆ ಸಾಲದು. ನಮ್ಮ ಕನ್ನಡಕ್ಕೆ ಪ್ರತ್ಯೇಕವಾದ ಬಾವುಟವಿದೆ. ಅದಕ್ಕೆ ಕೇಂದ್ರ ಸರ್ಕಾರ ಮಾನ್ಯತೆ ಕೊಡುತ್ತದೆಯೇ ಎಂಬುದನ್ನು ಪ್ರಧಾನಿಯವರು ಇದೇ ವೇಳೆ ಖಾತ್ರಿ ಪಡಿಸಬೇಕು. ಜೊತೆಗೆ, ಕನ್ನಡದ ಧ್ವಜಕ್ಕೆ ಮಾನ್ಯತೆಯನ್ನೂ ಕೊಡಬೇಕು ಎಂದು ಅವರು ಆಗ್ರಹಿಸಿದರು.



**ಕ್ರಮ ಕೈಗೊಳ್ಳಿ: ಬೊಮ್ಮಾಯಿಗೆ ಸವಾಲು**

ಇದೇ ವೇಳೆ, "ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲೇ ಹೆಚ್ಚು ಭ್ರಷ್ಟಾಚಾರವಾಗಿದೆ" ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಾಡಿರುವ ಆರೋಪಕ್ಕೆ ಸಿದ್ದರಾಮಯ್ಯ ತಿರುಗೇಟು ನೀಡಿದ್ದಾರೆ. "ನಾನು ಮುಖ್ಯಮಂತ್ರಿಯಾಗಿದ್ದಾಗ ನೀವು ವಿರೋಧ ಪಕ್ಷದಲ್ಲಿ ಇದ್ದಿರಿ. ಆಗ ಯಾಕೆ ಇಂಥ ಹೇಳಿಕೆ ನೀಡಲಿಲ್ಲ.

ಕೇವಲ ಚುನಾವಣೆ ಸಂದರ್ಭದಲ್ಲಿ ಮಾತ್ರ ಇಂಥ ಹೇಳಿಕೆ ನೀಡುತ್ತಿದ್ದೀರಿ" ಎಂದು ಮರುಪ್ರಶ್ನೆ ಹಾಕಿದ್ದಾರೆ.

ನಾನು ಐದು ವರ್ಷ ಮುಖ್ಯಮಂತ್ರಿಯಾಗಿದ್ದೆ. ಆ ಅವಧಿಯಲ್ಲಿ ಸರ್ಕಾರದೊಳಗೆ ಭಾರೀ ಭ್ರಷ್ಟಾಚಾರ ನಡೆದಿದೆ ಎಂದು ಬೊಮ್ಮಾಯಿ ಆರೋಪಿಸಿದ್ದಾರೆ.

ನೀವು ಐದು ವರ್ಷ ವಿರೋಧ ಪಕ್ಷದಲ್ಲಿದ್ದಾಗ ಆರೋಪ ಮಾಡಿದ್ದಿರಾ? ಅದು ಹೋಗಲಿ, ಇಂದು ಸರ್ಕಾರ ನಿಮ್ಮದೇ ಇದೆಯಲ್ವಾ? ನನ್ನ ಅವಧಿಯಲ್ಲಿ ಭ್ರಷ್ಟಾಚಾರ ಆಗಿರುವ ಬಗ್ಗೆ ನಿಮ್ಮಲ್ಲಿ ಸಾಕ್ಷಿಯಿದ್ದರೆ ಖಂಡಿತವಾಗಿಯೂ ಕ್ರಮ ತಗೊಳ್ಳಿ" ಎಂದು ಸಿದ್ದರಾಮಯ್ಯನವರು ನೇರವಾಗಿ ಬೊಮ್ಮಾಯಿ ಅವರನ್ನು ಆಗ್ರಹಿಸಿದರು.

**ವಿವಾದಗಳಷ್ಟೇ, ಅಭಿವೃದ್ಧಿ ಇಲ್ಲ'**

"ಬಿಜೆಪಿಯಿಂದ ರಾಜ್ಯದಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಆಗಿಲ್ಲ. ಹಲಾಲ್, ಹಿಜಾಬ್ ಎಂಬ ವಿವಾದಗಳನ್ನು ಹುಟ್ಟುಹಾಕಿ, ಸಮಾಜದಲ್ಲಿ ಅಶಾಂತಿಯ ವಾತಾವರಣವನ್ನು ನಿರ್ಮಿಸಿದ್ದಾರೆ. ಭ್ರಷ್ಟಾಚಾರ, ಬೆಲೆಯೇರಿಕೆ ಹಾಗೂ ನಿರುದ್ಯೋಗ – ಇವುಗಳನ್ನೇ ಬಿಜೆಪಿಯವರು ಸಮಾಜಕ್ಕೆ ಕೊಟ್ಟಿರುವುದು" ಎಂದು ಸಿದ್ದರಾಮಯ್ಯ ಆರೋಪಿಸಿದರು.

ಬಿಜೆಪಿ ಸರ್ಕಾರದ ಧೋರಣೆಯಿಂದಾಗಿ ಅಲ್ಪಸಂಖ್ಯಾತರು ಭಯದಿಂದ ಜೀವನ ಮಾಡುವಂತಾಗಿದೆ" ಎಂದು ಆರೋಪಿಸಿದ ಅವರು, ಹಲಾಲ್ ವಿವಾದ ಭುಗಿಲೆಬ್ಬಿಸಿದ ಸಂದರ್ಭದಲ್ಲಿ ಕೆಲವು ಜಾತ್ರೆಗಳಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ಮಳಿಗೆಗಳನ್ನು ಇಡಲು ಅವಕಾಶವನ್ನೇ ಕೊಡದಂತೆ ಮಾಡಲಾಯಿತು. ಇದರಿಂದಾಗಿ, ಅನೇಕ ಅಲ್ಪಸಂಖ್ಯಾತ ವ್ಯಾಪಾ–ರಿಗಳನ್ನು ವ್ಯಾಪಾರದ ಅವಕಾಶದಿಂದ ವಂಚಿತರನ್ನಾಗಿಸಲಾಯಿತು ಎಂದು ಆಪಾದಿಸಿದರು.

# ಅಬ್ಬರಿಸಿದ ಚಾಣಕ್ಯ: ಬಿಜೆಪಿಗೆ ಮೋಸ ಮಾಡಿದ ಸವದಿಯನ್ನು ಸೋಲಿಸಲು ಅಮಿತ್ ಶಾ ಕರೆ




ಅಥಣಿ: ಬಿಜೆಪಿಗೆ ಮೋಸ ಮಾಡಿದ ಲಕ್ಷ್ಮಣ ಸವದಿ ಅವರನ್ನು ಈ ಸಲದ ಚುನಾವಣೆಯಲ್ಲಿ ಸೋಲಿಸುವಂತೆ ಕೇಂದ್ರ ಗೃಹ ಸಚಿವ ಅಮಿತ್ ಷಾ ಕರ ನೀಡಿದರು.

ಇಲ್ಲಿಯ ಭೋಜರಾಜ ಕ್ರೀಡಾಂಗಣದಲ್ಲಿ ಶನಿವಾರ ಬಿಜೆಪಿ ಅಭ್ಯರ್ಥಿ ಮಹೇಶ ಕುಮಟಳ್ಳಿ ಪರ ಚುನಾವಣಾ ಪ್ರಚಾರ ನಡೆಸಿ ಅವರು ಮಾತನಾಡಿದರು.

ಕರ್ನಾಟಕ ಚುನಾವಣೆಯೇ ಬೇರೆ. ಅಥಣಿ ಚುನಾವಣೆಯೇ ಬೇರೆ. ಅಧಿಕಾರದ ಆಸೆಗೆ ತನ್ನ ಸ್ವಾರ್ಥಕ್ಕೆ ಬಿಜೆಪಿಗೆ ಮೋಸ ಮಾಡಿದ ಸವದಿಯನ್ನು ಈ ಸಲ ಸೋಲಿಸಲೇಬೇಕು ಎಂದು ಕರೆಕೊಟ್ಟರು.

ಕಾಂಗ್ರೆಸ್ ಬಜರಂಗದಳವನ್ನು ಅಪಮಾನಿಸಿದೆ. ಅಂತಹ ಪಕ್ಷದಿಂದ ಸ್ಪರ್ಧೆ ನಡೆಸಿರುವ ಸವದಿಯನ್ನು ಈ ಬಾರಿ ಅಥಣಿ ಮತದಾರರು ಸೋಲಿಸಬೇಕು ಎಂದು ಕರೆ ನೀಡಿದರು. ಮುಸ್ಲಿಮರಿಗೆ ಶೇಕಡಾ 6 ರಷ್ಟು ಮೀಸಲಾತಿ ನೀಡಲಾಗುವುದು ಎಂದು ಹೇಳಿರುವ ಕಾಂಗ್ರೆಸ್ಸಿಗರು ಯಾರ ಮೀಸಲಾತಿ ಕಡಿಮೆ ಮಾಡುತ್ತೀರಿ? ದಲಿತರು ಹಾಗೂ ಲಿಂಗಾಯತರ ಮೀಸಲಾತಿ ಕಡಿಮೆ ಮಾಡುತ್ತೀರಾ? ಎಂದು ಪ್ರಶ್ನಿಸಿದ ಅವರು ಪ್ರಧಾನಿ ಮೋದಿ ಅವರು ಮಹದಾಯಿ ನೀರನ್ನು ಉತ್ತರ ಕರ್ನಾಟಕಕ್ಕೆ ನೀಡಿದರು. ಸಮಸ್ತ ಕಿತ್ತೂರು ಕರ್ನಾಟಕ ರೈತ–ರಿಗೆ ಅನುಕೂಲ ಮಾಡಿಕೊಟ್ಟರು. ಬಿಜೆಪಿ ಹತ್ತು ಹಲವು ಅಭಿವೃದ್ಧಿ ಕಾರ್ಯಗಳಿಂದ ಕರ್ನಾಟಕ ಜನತೆಯ ಮನ ಗೆದ್ದಿದೆ ಎಂದು ಹೇಳಿದರು.

ಮಹೇಶ ಕುಮಟಳ್ಳಿ ಮತ್ತು ರಮೇಶ ಜಾರಕಿಹೊಳಿ ಬಿಜೆಪಿಗೆ ಬಂದ ಕಾರಣ ರಾಜ್ಯದಲ್ಲಿ ಮತ್ತೆ ಬಿಜೆಪಿ ಸರ್ಕಾರ ಆಡಳಿತ ನಡೆಸುವಂತಾಗಿದೆ. ರಾಹುಲ್ ಗಾಂಧಿ ಹೋದಲ್ಲೆಲ್ಲ ಕಾಂಗ್ರೆಸ್ ಪಕ್ಷ ಸೋತಿ–ದೆ. ಮೋದಿಯವರನ್ನು ವಿಷದಹಾವು ಎಂದು ಖರ್ಗೆ ಕರೆದಿದ್ದಾರೆ. ಎಷ್ಟು ದಿನಗಳ ಕಾಲ ಮೋದಿಗೆ ಬಯುತ್ತೀರಿ. ಇದರಿಂದ ಕಮಲವೇ ಅರಳುತ್ತದೆ. ಪಿಎಫ್ ಐ ಸಂಘಟನೆಯನ್ನು ನಾವೇ ನಿಷೇಧಿಸುತ್ತೇವೆ. ಬಜರಂಗದಳವನ್ನು ನಿಷೇಧಿಸುವುದಾಗಿ ಹೇಳಿರುವ ಕಾಂಗ್ರೆಸ್ಸಿಗೆ ಬುದ್ಧಿ ಕಲಿಸಿ ಎಂದು ಅವರು ತಿಳಿಸಿದರು.

# ಮಹಾಂತೇಶ ದೊಡ್ಡಗೌಡರ ಕಾರ್ಯವೈಖರಿ, ಬಿ.ಜೆ.ಪಿ ಪಕ್ಷದ ತತ್ವ ಸಿದ್ಧಾಂತಗಳ ಮೆಚ್ಚಿ ಬಿಜೆಪಿ ಸೇರ್ಪಡೆ



ಬೈಲಹೊಂಗಲ: ಸಂಪಗಾಂವ ಗ್ರಾಮದಲ್ಲಿ ಗ್ರಾಮ ಪಂಚಾಯತ ಅಧ್ಯಕ್ಷರಾದ ಶ್ರೀಮತಿ ದೀಪಾ ಮಹಾಂತೇಶ ದಳವಾಯಿ ಇವರು ಕಿತ್ತೂರು ಶಾಸಕರಾದ ಮಹಾಂತೇಶ ದೊಡ್ಡಗೌಡರ ರವರ ಕಾರ್ಯವೈಖರಿ ಹಾಗೂ ಬಿ.ಜೆ.ಪಿ ಪಕ್ಷದ ತತ್ವ ಸಿದ್ಧಾಂತಗಳನ್ನು ಮೆಚ್ಚಿ ಇವರ ಬೆಂಬಲಿಗರ ಜೊತೆ ಬಿ.ಜೆ.ಪಿ ಪಕ್ಷಕ್ಕೆ ಸಂಪಗಾಂವ ಮಹಾಶಕ್ತಿ ಕೇಂದ್ರದ ಪ್ರಮುಖರಗಿರುವ ಶ್ರೀ ಮಲ್ಲಿಕಾರ್ಜುನ ಉಳ್ಳೇಗಡ್ಡಿ ಇವರ ನೇತೃತ್ವದಲ್ಲಿ ಸೇರ್ಪಡೆಗೊಂಡರು.

ಮಾಜಿ ಟಿ.ಪಿ ಯಾಗಿರುವ ಬಸವರಾಜ ಮಾಳಪ್ಪನವರ ಹಾಗೂ ರಮೇಶ ದಳವಾಯಿ, ಆನಂದ ಕಳಸನ್ನವರ, ಮಹಾಂತೇಶ ದಳವಾಯಿ, ಅಭಿಲಾಷ ಮರಕಟ್ಟಿ ಇವರ ಸಮ್ಮುಖದಲ್ಲಿ ದೀಪಾ ಮಹಾಂತೇಶ ದಳವಾಯಿ, ಕಾಶವ್ವ ಸುತಗಟ್ಟಿ, ಈರವ್ವ ಶಂಕರೆಪ್ಪ ಉಪ್ಪಾರ, ಪ್ರೇಮಾ ಪ್ರಕಾಶ ದಳವಾಯಿ, ಲಕ್ಷ್ಮೀ ಬಾಬು ಮಾಳನ್ನವರ, ಶೋಭಾ ರಮೇಶ ತೋಟಗಿ, ಮಲ್ಲವ್ವ ಮಹಾಂತೇಶ ಉಪ್ಪಾರ, ನಿರ್ಮಲಾ ಉಪ್ಪಾರ ಇವರ ಬೆಂಬಲಿಗರ ಜೊತೆ 100 ಕ್ಕಿಂತಲೂ ಹೆಚ್ಚು ಜನರು ಸೇರ್ಪಡೆಗೊಂಡರು.

# ಖರ್ಗೆ ಕುಟುಂಬ ಹತ್ಯೆ ಆಡಿಯೋ ಕುರಿತು ತನಿಖೆ: ಬೊಮ್ಮಾಯಿ

ಬೆಂಗಳೂರು: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಅವರ ಇಡೀ ಕುಟುಂಬವನ್ನು ಹತ್ಯೆ ಮಾಡುತ್ತೇನೆ ಎಂದು ಚಿತ್ತಾಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ರೌಡಿಶೀಟ–ರ್ ಹಿನ್ನೆಲೆಯ ಮಣಿಕಂಠ ರಾಠೋಡ ಅವರು ಮಾತನಾಡಿದ್ದಾರೆ ಎನ್ನಲಾದ ಆಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಈ ಕುರಿತು ಮಾತನಾಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ನಾವು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸುತ್ತೇವೆ. ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುತ್ತೇವೆ' ಎಂದು ಹೇಳಿದ್ದಾರೆ.

ಖರ್ಗೆ ಹೆಂಡರು, ಮಕ್ಕಳನ್ನು ಸಾಫ್(ಮುಗಿಸುತ್ತೇನೆ) ಮಾಡುತ್ತೇನೆ' ಎಂದು ಮಣಿಕಂಠ ರಾಠೋಡ ಹೇಳಿದ್ದಾರೆ. ಬಿಜೆಪಿ ಮುಖಂಡ ಎನ್ನಲಾದ ವ್ಯಕ್ತಿಯ ಜತೆ ಫೋನ್ ಸಂಭಾಷಣೆ ಆಡಿಯೊ ಹ–ರಿದಾಡಿದೆ.

ಮಣಿಕಂಠ ರಾಠೋಡ ಅವರು ಮಾತನಾಡಿದ್ದು ಎನ್ನಲಾದ ಆಡಿಯೊವನ್ನು ಸುದ್ದಿಗೋಷ್ಠಿಯಲ್ಲಿ ಶನಿವಾರ ಬಿಡುಗಡೆ ಮಾಡಿ ಮಾತನಾಡಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, 'ಕರ್ನಾಟಕ ರಾಜ್ಯದ ಜನ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸಂಪೂರ್ಣ ಬೆಂಬಲ ತೋ–ರಿಸುತ್ತಿರುವುದರಿಂದ ಕಂಗೆಟ್ಟಿರುವ ಬಿಜೆಪಿ, ಮಲ್ಲಿಕಾರ್ಜುನ ಖರ್ಗೆ, ಅವರ ಪತ್ನಿ ಸೇ–ರಿದಂತೆ ಇಡೀ ಕುಟುಂಬವನ್ನೇ ಹತ್ಯೆ ಮಾಡುವ ಸಂಚು ರೂಪಿಸಿದೆ' ಎಂದು ಆರೋಪಿಸಿದ್ದಾರೆ.



'ಈ ಆಡಿಯೊದಲ್ಲಿ ಬಿಜೆಪಿಯ ಸಂಚು ಸ್ಪಷ್ಟವಾಗಿದೆ. ಹತ್ಯೆಗೆ ಸಂಚು ನಡೆದಿದ್ದರೂ ಮೋದಿ ಹಾಗೂ ಬಿಜೆಪಿ ನಾಯಕರು ಮೌನಕ್ಕೆ ಶರಣಾಗಿದ್ದಾರೆ' ಎಂದರು.

'ಬಿಜೆಪಿ ವಿರುದ್ಧ ಇದೊಂದು ಗಂಭೀರ ಆರೋಪವಾದ್ದು, ಈ ಆಡಿಯೊದ ಸತ್ಯಾತ್ಯತೆ ಏನು' ಎಂದು ಪ್ರಶ್ನಿಸಿದಾಗ 'ಮಲ್ಲಿಕಾರ್ಜುನ ಖರ್ಗೆ, ಅವರ ಪತ್ನಿ ಹಾಗೂ ಮಕ್ಕಳ ಹತ್ಯೆಗೆ ಸಂಚು ರೂಪಿಸಿರುವುದನ್ನು ನಾವು ನಿರ್ಲಕ್ಷಿಸಲು ಸಾಧ್ಯವಿಲ್ಲ.

ಈ ಬೆದರಿಕೆ ಹಾಕಿರುವುದು ಬೇರಾರೂ ಅಲ್ಲ, ಚಿತ್ತಾಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ.

ಈತ ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿಯ ಆತ್ಮೀಯ ನೀಲಿ ಕಂಗಳ ಹುಡುಗ. ಇದೇ ಕಾರಣಕ್ಕೆ ಪ್ರಧಾನಿ ಮೋದಿ ಹಾಗೂ ಬೊಮ್ಮಾಯಿ ಮೌನಕ್ಕೆ ಶರಣಾಗಿದ್ದಾರೆ' ಎಂದರು.

'ಇದು ಕೇವಲ ಖರ್ಗೆ ಅವರ ಮೇಲೆ ದಾಳಿಯ ಸಂಚು ಮಾತ್ರವಲ್ಲ, ಕನ್ನಡಿಗರ ಮೇಲೆ ದಾಳಿ ಮಾಡುವ ಸಂಚು. ರಾಜ್ಯದ ಜನ ಇದನ್ನು ಸಹಿಸಿಕೊಂಡು ಕೂರುವುದಿಲ್ಲ. ಚುನಾವಣೆಯಲ್ಲಿ ತಕ್ಕ ಉತ್ತರ ನೀಡಲಿದ್ದಾರೆ' ಎಂದರು.



ಬೈಲಹೊಂಗಲ: ಚೆನ್ನಮ್ಮನ ಕಿತ್ತೂರು ಮತಕ್ಷೇತ್ರದ ಭಾರತೀಯ ಜನತಾ ಪಾರ್ಟಿಯ ಅಧಿಕೃತ ಅಭ್ಯರ್ಥಿ ಮಹಾಂತೇಶ ದೊಡಗೌಡರ ಅವರು ತಾಲೂಕಿನ ಯರಡಾಲ ಗ್ರಾಮದಲ್ಲಿ ಶನಿವಾರ ಗ್ರಾಮದ ವಿವಿಧ ಬೀದಿಗಳಲ್ಲಿ ಪ್ರಚಾರ ನಡೆಸಿದರು.

# ರೈತರ ಕೃಷಿ ಚಟುವಟಿಕೆಗಳಿಗೆ ನೀರು ಪೂರೈಕೆ: ಶಾಸಕ ಬಾಲಚಂದ್ರ ಜಾರಕಿಹೊಳಿ

ಮೂಡಲಗಿ: ಈ ಭಾಗದ ರೈತ ಸಮುದಾಯದ ಕೃಷಿ ಚಟುವಟಿಕೆಗಳನ್ನು ಪೂರಕವಾಗಲು ಘಟಪ್ರಭಾ ಬಲದಂಡೆ ಕಾಲುವೆ ಮೂಲಕ ನೀರು ಹರಿಸಿ ಅನುಕೂಲ ಮಾಡಿ ಕೊಡಲಾಗುತ್ತಿದೆ ಎಂದು ಕೆಎಂಎಫ್ ಅಧ್ಯಕ್ಷ ಹಾಗೂ ಅರಭಾವಿ ಬಿಜೆಪಿ ಅಭ್ಯರ್ಥಿ ಬಾಲಚಂದ್ರ ಜಾರಕಿಹೊಳಿ ತಿಳಿಸಿದರು.

ತಾಲ್ಲೂಕಿನ ದಂಡಾಪೂರ ಗ್ರಾಮದಲ್ಲಿ ತೆರಳಿ ಮತ ಯಾಚಿಸುತ್ತಿದ್ದ ಅವರು, ರೈತ ಸಮುದಾಯದ ಬೇಡಿಕೆಗಳಿಗೆ ಸ್ಪಂದಿಸುತ್ತಿರುವುದು ನನಗೆ ಖುಷಿಯಾಗುತ್ತಿದೆ ಎಂದು ಹೇಳಿದರು.

ನಾನು ಶಾಸಕನಾಗಿ ಆಯ್ಕೆಯಾದಾಗಿನಿಂದ ಘಟಪ್ರಭಾ ಎಡದಂಡೆ ಮತ್ತು ಘಟಪ್ರಭಾ ಬಲದಂಡೆಯ ಕಾಲುವೆಯ ಟೆಲ್ ಎಂಡ್ ರೈತರಿಗೆ ಕೃಷಿ ಚಟುವಟಿಕೆಗಳನ್ನು ಮತ್ತು ಕುಡಿಯುವ ನೀರಿನ ಸಲುವಾಗಿ ಹಿಡಕಲ್ ಜಲಾಶಯ ದಿಂದ ನೀರನ್ನು ಹರಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಾ ಬರುತ್ತಿದ್ದೇನೆ.

ಕುಡಿಯುವ ನೀರಿನ ಆಹಾಕಾರ ತಪ್ಪಿಸಲು ಜನತೆಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಸಮರ್ಪಕವಾಗಿ ಮಾಡುತ್ತಿದ್ದೇನೆ. ರೈತರ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸುವ ಗುರಿ ನನ್ನದು ಎಂದು ಹೇಳಿದರು.

ಅರಭಾವಿ ಕ್ಷೇತ್ರದ ಪ್ರತಿ ಸಮುದಾಯಗಳ ಸಹೋದರ– ಸಹೋದರಿಯರು ನನ್ನ ತಮ್ಮ ಕುಟುಂಬದ ಸದಸ್ಯನಂತೆ ಚುನಾವಣೆಯಲ್ಲಿ ಬೆಂಬಲಿಸಿ ಆಶೀರ್ವದಿಸುತ್ತಿದ್ದಾರೆ. ಜನರ ಪ್ರೀತಿ–ವಿಶ್ವಾಸಗಳಿಗೆ ಎಷ್ಟು ಕೃತಜ್ಞತೆ ಸಲ್ಲಿಸಿದರೂ ಸಾಲದು. ಮತಕ್ಷೇತ್ರದ ಸಮಸ್ತ ಮತದಾರ ಬಂಧುಗಳಿಗೆ ಸದಾ ಋಣಿಯಾಗಿರುವೆ ಎಂದು ಹೇಳಿದರು.



ದಂಡಾಪೂರ ಗ್ರಾಮವು ಈ ಮೊದಲಿನಿಂದಲೂ ನನಗೆ ಪ್ರತಿ ಚುನಾವಣೆಗಳಲ್ಲಿ ಮುನ್ನಡೆ ಮತಗಳನ್ನು ನೀಡುತ್ತ ಬರುತ್ತಿದ್ದಾರೆ. ನಮ್ಮ ಕ್ಷೇತ್ರದ ಮತಗಟ್ಟೆಯು ಈ ಗ್ರಾಮದಿಂದಲೇ ಆರಂಭವಾಗುತ್ತಿದೆ.

ಇಲ್ಲಿಂದ ಆರಂಭವಾಗುವ ಮುನ್ನಡೆಯು ಪ್ರತಿ ಮತಗಟ್ಟೆಗಳಲ್ಲಿಯೂ ಲೀಡ್ ಕೊಡುವ ಮೂಲಕ ಎಲ್ಲ ಸಮಾಜದ ಬಾಂಧವರು ನನ್ನ ಗೆಲುವಿನಲ್ಲಿ ಮಹತ್ತರ ಪಾತ್ರ ವಹಿಸುತ್ತಾರೆ ಎಂದು ತಿಳಿಸಿದರು.

ಮೇ 10 ರಂದು ನಡೆಯುವ ವಿಧಾನ ಸಭೆ ಚುನಾವಣೆಯಲ್ಲಿ ನನ್ನ ಶೇಜ್ 5 ಇದ್ದು, ಕಮಲ ಹೂವಿನ ಗುರುತಿಗೆ ಮತ ನೀಡುವಂತೆ ಕೋರಿಕೊಂಡ ಅವರು, ನನ್ನ ಗೆಲುವಿಗೆ ಕಾರ್ಯಕರ್ತ ಬಂಧುಗಳು ಪ್ರತಿಯೊಬ್ಬ ಮತದಾರರನ್ನು ಸಂಪರ್ಕ ಸಾಧಿಸಿ ಡಬಲ್ ಎಂಜಿನ್ ಸರಕಾರದ ಜನಪ್ರಿಯ ಸಾಧನೆಗಳನ್ನು ತಿಳಿಸುವಂತೆ ಮನವಿ ಮಾಡಿದರು.

ಘಟಪ್ರಭಾ ಸಹಕಾರಿ ಸಂಸ್ಥೆಯ ನಿರ್ದೇಶಕ ಲಕ್ಷ್ಮಣ ಗಣಪ್ಪಗೋಳ, ಗ್ರಾಮ ಪಂಚಾಯ್ತಿ ಅಧ್ಯಕ್ಷ ಮಹಾದೇವ ತುಕ್ಕಾನಟ್ಟಿ, ಬೀರಪ್ಪ ಸೀಮಕ್ಕನ್ನವರ, ಸಿದ್ದಪ್ಪ ಧವಳೇಶ್ವರ ರಾಮಪ್ಪ ದೇವರಮನಿ, ರಾಮಪ್ಪ ಸತ್ತೆಪ್ಪಗೋಳ, ಲಕ್ಷ್ಮಣ ಸೀಮಕ್ಕನವರ, ರುದ್ರಪ್ಪ ಪೋಲಿಸಗೋಳ, ಸಿದ್ದಪ್ಪ ತುಕ್ಕಾನಟ್ಟಿ, ಪುಂಡಲೀಕ ಗಣಪ್ಪಗೋಳ, ಮಲಕಾರಿ ಗಣಪ್ಪಗೋಳ, ಸಿದ್ದಪ್ಪ ಖೋತ, ಸಿದ್ರಾಮ ಸನದಿ ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.

ನಂತರ ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ಮತ ಯಾಚಿಸಿದರು.

# ಚುನಾವಣೆಯಲ್ಲಿ ಯುವ ಮತದಾರರ ಪಾತ್ರ ಮುಖ್ಯ: ಮಾಜಿ ಸೈನಿಕ ವೀರು ದೊಡವೀರಪ್ಪನವರ




ಬೆಳಗಾವಿ: ಇಂದಿನ ಯುವಪೀಳಿಗಿಯೇ ಭಾರತದ ಭವಿಷ್ಯದ ಹ–ರಿಕಾರರು ಎಂಬುದ ಜನಜನಿತ. ವಿಧಾನಸಭೆ ಚುನಾವಣೆಯಲ್ಲಿ ಯುವಜನತೆ ಮತಗಳು ಪ್ರಮುಖ ಪಾತ್ರ ವಹಿಸುತ್ತವೆ. ಈ ನಿಟ್ಟಿನಲ್ಲಿ ಮತಾದರರು ಯಾವುದೇ ಆಮಿಷಗಳಿಗೆ ಒಳಗಾಗದೆ ಸದೃಡ ಸರಕಾರವನ್ನು ರಚಿಸುವಲ್ಲಿ ನೂರರಷ್ಟು ಮತದಾನ ಮಾಡಲು ಶ್ರಮಿಸಬೇಕು ಎಂದು ಸಮಾಜ ಸೇವಕ, ಮಾಜಿ ಸೈನಿಕ ವೀರು ದೊಡವೀರಪ್ಪನವರ ಹೇಳಿದರು.

ಚನ್ನಮ್ಮನ ಕಿತ್ತೂರಿನ ಗ್ರಾಮೀಣ ಯುವಕರ ಸೇನಾ ತರಬೇತಿ ಕೇಂದ್ರದಲ್ಲಿ ನಡೆದ ಮತದಾನ ಜಾಗೃತಿ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಅವರು ಮಾತನಾಡಿ, ಭಾರತ ಅತಿ ದೊಡ್ಡ ಪ್ರಜಾಪ್ರಭುತ್ವ ಹೊಂದಿದ ರಾಷ್ಟ್ರ ಚುನಾವಣಾ ಆಯೋಗದ ನಿರ್ದೇಶನದಂತೆ ಪ್ರತಿಯೊಬ್ಬರು ಮತದಾನ ದಿನ ಮತದಾನದ ಹಕ್ಕನ್ನು ಚಲಾವಣೆ ಮಾಡಿ ಪ್ರಜಾಪ್ರಭುತ್ವವನ್ನು ಬಲಿಷ್ಠಗೊಳಿಸಲು ಮುಂದಾಗುವಂತೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಸಂಸ್ಥಾಪಕರು ಪರ್ವೇಜ್ ಇನಾಂದಾರ್, ಗೌಡಪ್ಪ ಪರ್ವತ ಗೌಡರ, ಶಫೀಕ್ ಇನಾಂದಾರ್ ಮಲ್ಲೇಶಪ್ಪ ಬಗನಾಳ ಹಾಗೂ ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.



ಬೈಲಹೊಂಗಲ: ಚೆನ್ನಮ್ಮನ ಕಿತ್ತೂರು ಮತಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಧಿಕೃತ ಅಭ್ಯರ್ಥಿ ಬಾಬಾಸಾಹೇಬ್ ಪಾಟೀಲ ಅವರ ಪರ ಪತ್ನಿ ರೋಹಿಣಿ ಪಾಟೀಲ ಅವರು ತಾಲೂಕಿನ ಯರಡಾಲ ಗ್ರಾಮದಲ್ಲಿ ಶನಿವಾರ ಪ್ರಚಾರ ನಡೆಸಿದರು.

# ಕಾಂಗ್ರೆಸ್ ಅಭ್ಯರ್ಥಿ ಬಾಬಾಸಾಹೇಬ ಪಾಟೀಲ ಬಹುಮತ ಅಂತರದಿಂದ ಗೆಲ್ಲಿಸಿ: ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ

ಚನ್ನಮ್ಮನ ಕಿತ್ತೂರು: ಚನ್ನಮ್ಮನ ಕಿತ್ತೂರು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಬಾಬಾಸಾಹೇಬ ಪಾಟೀಲ ಪರವಾಗಿ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಅವರು ಭರ್ಜರಿ ರೋಡ ಶೋ ನಡೆಸಿದರು.

ಚನ್ನಮ್ಮನ ಕಿತ್ತೂರು ಕ್ಷೇತ್ರದ ನೇಸರಗಿ ಹಾಗೂ ವಿವಿಧ ಗ್ರಾಮಗಳಲ್ಲಿ ಪ್ರಚಾರ ನಡೆಸಿದರು. ಕ್ಷೇತ್ರದ ಪ್ರಗತಿಯತ್ತ ಸಾಗಬೇಕಾದರೆ ನಿಮ್ಮ ಅತ್ಮೀಯ ನಾಯಕರಾದ ಬಾಬಾಸಾಹೇಬ ಪಾಟೀಲ ಅವರನ್ನು ಬಹುಮತ ಅಂತರದಿಂದ ಗೆಲ್ಲಲು ಮತದಾರರು ಬಲ ತುಂಬಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಮತ ಬೇಟೆ ನಡೆಸಿದರು.




ಈ ವೇಳೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಅವರು ಮಾತನಾಡಿ, ನಿಮ್ಮ ಆಶಯದಂತೆ ಬಾಬಾಸಾಹೇಬ ಪಾಟೀಲ ಅವರನ್ನು ಚನ್ನಮ್ಮನ ಕಿತ್ತೂರು ಕ್ಷೇತ್ರದಿಂದ ಸ್ಪರ್ಧಿಸುತ್ತಾರೆ. ನನ್ನ ಸಹೋದರರನ್ನು ಗೆಲಿಸುವ ಜವಾಬ್ದಾರಿ ನಿಮ್ಮ ಮೇಲಿದೆ.

ಚುನಾವಣೆಗೆ ನಾಲ್ಕು ದಿನ ಬಾಕಿ ಉಳಿದಿದ್ದು, ಕ್ಷೇತ್ರ ಉತ್ತಮ ಭವಿಷ್ಯಕ್ಕಾಗಿ ಜನರ ಬಗ್ಗೆ ಕಳಕಳ ಇರುವ ನಾಯಕರ ಬಾಬಾಸಾಹೇಬ ಪಾಟೀಲ ಅವ–ರಿಗೆ ಮತ ನೀಡಬೇಕೆಂದು ಮನವಿ ಮಾಡಿಕೊಂಡರು.

ನಮ್ಮ ನಾಯಕರಾದ ಬಾಬಾಸಾಹೇಬ ಪಾಟೀಲ ಅವ–ರಿಗೆ ಟಿಕೆಟ್ ನೀಡಬೇಕೆಂಬ ಬೇಡಿಕೆ ಈಡೇರಿದೆ. ನಿಮ್ಮ ಜವಾಬ್ದಾರಿ ನೀವು ನಿಭಾಯಿಸಬೇಕಾಗಿದೆ, ಬಹುಮತ ಅಂತರದಿಂದ ಬಾಬಾಸಾಹೇಬ ಪಾಟೀಲ ಜಯಶಾಲಿ ಯಾಗಿಸಲು ಶ್ರಮಿಸಬೇಕು. ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯನ್ನು ಗುರುತಿಸಿ, ಕಾಂಗ್ರೆಸ್ ಕಾರ್ಯಕರ್ತರು ಮತದಾರರನ್ನು ಮತಗಟ್ಟೆವರೆಗೂ ಕರೆತಂದು ಮತ ಹಾಕಿಸಬೇಕು.

ರಾಜ್ಯದ ಪ್ರಗತಿಗಾಗಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದು ಅನಿವಾರ್ಯತೆ ಇದೆ. ಬಿಜೆಪಿಯಿಂದ 40% ಭ್ರಷ್ಟಾಚಾರ ನಡೆದಿದೆ.

ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ 80% ಭ್ರಷ್ಟಾಚಾರ ನಡೆದರೆ ಅಚ್ಚರಿ ಇಲ್ಲ, ಹೀಗಾಗಿ ಪ್ರಧಾನಿ ಮೋದಿಯವರಿಗೆ ಬ್ರೇಕ್ ಹಾಕುವ ಕೆಲಸವನ್ನು ಮತದಾರರು ಮಾಡಬೇಕಿದೆ. ಬಿಜೆಪಿ ಆಡಳಿತಕ್ಕೆ ಬಂದ ಬಳಿಕ ರೈತರಿಗೆ ಅನ್ಯಾಯವಾಗಿದೆ, ಬೆಲೆಗಳು ಗಗನಕ್ಕೇರಿವೆ ಮತದಾರರು ಗಮನದಲ್ಲಿ ಇಟ್ಟಕೊಂಡು ಕಾಂಗ್ರೆಸ್ ಗೆ ಮತ ಹಾಕಬೇಕು ಎಂದು ಮನವಿ ಮಾಡಿಕೊಂಡರು.

# ಮಣಿಪುರ ಉದ್ವಿಗ್ನತೆ: 54 ಮಂದಿ ಪ್ರಾಣ ಹಾನಿ



ನವದೆಹಲಿ: ಮಣಿಪುರದಲ್ಲಿ ಮೇ 3 ರಂದು ಪರಿಶಿಷ್ಟ ಪಂಗಡದ ಸ್ಥಾನಮಾನದ ಕು–ರಿತು ನ್ಯಾಯಾಲಯದ ಆದೇಶದ ವಿರುದ್ಧ ಆದಿವಾಸಿಗಳು ನಡೆಸುತ್ತಿರುವ ಪ್ರತಿಭಟನೆಯ ಸಂದರ್ಭದಲ್ಲಿ ಘರ್ಷಣೆಗಳು ನಡೆದ ನಂತರ ಪರಿಸ್ಥಿತಿಯು ಉದ್ವಿಗ್ನತೆಯನ್ನು ಮುಂದುವರೆಸಿದೆ.

ಮೇ 3 ರಂದು ಮಣಿಪುರ ರಾಜ್ಯದಾದ್ಯಂತ ಹೊಸ ಉದ್ವಿಗ್ನತೆಯನ್ನು ಉಂಟುಮಾಡಿದ ಂಖಿಖಗಾ ಮೆರವಣಿಗೆಯ ನಂತರ, ವಾಹನಗಳು, ಮನೆಗಳು, ಶಾಲೆಗಳು, ಚರ್ಚ್‌ಗಳು ಮತ್ತು ವಾಣಿಜ್ಯ ಆಸ್ತಿಗಳನ್ನು ಪ್ರತಿಭಟನಾ ಗುಂಪುಗಳಿಂದ ಸುಟ್ಟು ಹಾಕಲಾಯಿತು. ಭದ್ರತಾ ಪಡೆಗಳ ಮಧ್ಯಪ್ರವೇಶದ ನಂತರ ರಾಜ್ಯದಲ್ಲಿ ಪರಿಸ್ಥಿತಿ ಸುಧಾರಿಸಿದೆ ಎಂದು ಮಣಿಪುರ ಡಿಜಿಪಿ ಹೇಳಿದ್ದಾರೆ.


ಮಣಿಪುರದಲ್ಲಿ ಭುಗಿಲೆದ್ದ ಹಿಂಸಾಚಾರದಲ್ಲಿ 54 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮಣಿಪುರದ ಚುರಾಚಂದ್‌ಪುರ ಜಿಲ್ಲೆಯ ಅವರ ಗ್ರಾಮದಲ್ಲಿ ಶುಕ್ರವಾರ ಸಿಆರ್‌ಪಿಎಫ್ ಕೋಬ್ರಾ ಕಮಾಂಡೋವನ್ನು ಶಸ್ತ್ರಸಜ್ಜಿತ ದಾಳಿಕೋರರು ಗುಂಡಿಕ್ಕಿ ಕೊಂದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾನ್‌ಸ್ಟೆಬಲ್ ಚೋನ್‌ಖೋಲೆನ್ ಹಾಕಿಪ್ ಹತ್ಯೆಯಾದ ಹಿನ್ನೆಲೆಯಲ್ಲಿ, ಸಿಆರ್‌ಪಿಎಫ್ ಶುಕ್ರವಾರ ಮಣಿಪುರದಿಂದ ಬಂದಿರುವ ತನ್ನ ಸಿಬ್ಬಂದಿಗೆ ಮತ್ತು ಅವರ ತವರು ರಾಜ್ಯದಲ್ಲಿ ರಜೆಯ ಮೇಲೆ ಕುಟುಂಬ ಸದಸ್ಯರೊಂದಿಗೆ ತಮ್ಮ ಹತ್ತಿರದ ಭದ್ರತಾ ನೆಲೆಗೆ "ತಕ್ಷಣ" ವರದಿ ಮಾಡುವಂತೆ ಸೂಚಿಸಿದೆ. ಇದುವರೆಗೆ ಒಟ್ಟು 13,000 ಜನರನ್ನು ರಕ್ಷಿಸಲಾಗಿದೆ ಮತ್ತು ಸುರಕ್ಷಿತ ಆಶ್ರಯಕ್ಕೆ ಸ್ಥಳಾಂತರಿಸಲಾಗಿದೆ ಎಂದು ರಕ್ಷಣಾ ವಕ್ತಾರರು ತಿಳಿಸಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಮುಖ್ಯಮಂತ್ರಿ ಎನ್ ಬಿರೇನ್ ಸಿಂಗ್ ಮತ್ತು ಉನ್ನತ ಅಧಿಕಾರಿಗಳೊಂದಿಗೆ ಮಣಿಪುರದ ಪರಿಸ್ಥಿತಿಯನ್ನು ಪರಿಶೀಲಿಸಿದರು. ಹಿಂಸಾಚಾರ ಪೀಡಿತ ರಾಜ್ಯದಲ್ಲಿ ಶಾಂತಿ ಕಾಪಾಡಲು ಕೇಂದ್ರವು ಹೆಚ್ಚುವರಿ ಭದ್ರತಾ ಪಡೆಗಳು ಮತ್ತು ಗಲಭೆ ವಿರೋಧಿ ವಾಹನಗಳನ್ನು ಕಳುಹಿಸಿದೆ ಎಂದು ಮೂಲಗಳು ತಿಳಿಸಿವೆ.

# ರಾಜ್ಯದಲ್ಲಿ ಬಿಜೆಪಿ ಶಕ್ತಿ ಕುಂದಿದೆ: ದೇವೇಗೌಡ

ಶಿಡ್ಲಘಟ್ಟ: ಕರ್ನಾಟಕದಲ್ಲಿ ಬಿಜೆಪಿ ಶಕ್ತಿ ಕುಂದಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಗೆ ಗೊತ್ತಾಗಿದೆ ಹೀಗಾಗಿ ಜನರನ್ನು ಮರಳು ಮಾಡಲು ಕರ್ನಾಟಕದಲ್ಲಿ ರೋಡ್ ಶೋ ಮಾಡುತ್ತಿದ್ದಾರೆ ಎಂದು ಮಾಜಿ ಪ್ರಧಾನಿ ಹೆಚ್ ಡಿ ದೇವೇಗೌಡ ಲೇವಡಿ ಮಾಡಿದರು.

ನಗರದಲ್ಲಿ ಜೆಡಿಎಸ್ ಅಭ್ಯರ್ಥಿ ಬಿ.ಎನ್ ರವಿಕುಮಾರ್ ಅವರ ಪರವಾಗಿ ಮತಯಾಚಿಸಿ ಮಾತನಾಡಿದ ಅವರು, ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಗೆ ಕರ್ನಾಟಕದಲ್ಲಿ ಶಕ್ತಿ ಕುಂದಿದೆ ಎಂದು ಅರಿವಾಗಿದೆ ಕರ್ನಾಟಕದಲ್ಲಿ ಲೋಕಸಭೆ ಚುನಾವಣೆ ನಡೆಯುತ್ತಿಲ್ಲ ಆದ್ರೂ ಸಹ ಪ್ರಧಾನಮಂತ್ರಿಗಳು ಮಾಡುತ್ತಿದ್ದಾರೆ ಆ ಪಕ್ಷಕ್ಕೆ ಯಾವ ಸ್ಥಿತಿ ಬಂದಿದೆ ಎಂಬುದನ್ನು ಇದರಿಂದ ಅರ್ಥವಾಗುತ್ತದೆ ಕರ್ನಾಟಕದ ಜನರು ಬುದ್ಧಿವಂತ ಇದ್ದಾರೆ ಅವರನ್ನು ಮರಳು ಮಾಡಲು ಸಾಧ್ಯವಿಲ್ಲ ಎಂದು ತಿರುಗೇಟು ನೀಡಿದರು.



ಕರ್ನಾಟಕದಲ್ಲಿ ಜಾತ್ಯಾತೀತ ಸರ್ಕಾರ ರಚನೆ ಮಾಡುವ ಸಲುವಾಗಿ ಕಾಂಗ್ರೆಸ್ ಪಕ್ಷದೊಂದಿಗೆ ಬೇಷರತ್ತಾಗಿ ಸಮಿಶ್ರ ಸರ್ಕಾರವನ್ನು ಕುಮಾರಸ್ವಾಮಿ ನೇತೃತ್ವದಲ್ಲಿ ರಚಿಸಲಾಯಿತು ಆದರೇ ಕೆಲ ಕಾಂಗ್ರೆಸ್ ಮುಖಂಡರು ಸಮ್ಮಿಶ್ರ ಸರಕಾರವನ್ನು ಪತನಗೊಳಿಸಲು ಪ್ರಾರಂಭದಿಂದ ಷಡ್ಯಂತರ ಮತ್ತು ಹೊನ್ನಾರಗಳನ್ನು ನಡೆಸುತ್ತಾ ಬಂದರು ಕೊನೆಯದಾಗಿ ಸರ್ಕಾರವನ್ನು ಬೀಳಿಸಲು 18 ಜನರನ್ನು ಮುಂಬೈ ಕಳಿಸಿದರು ಯಾರು ಎಂದು ಆತ್ಮಾವಲೋಕನ ಮಾಡಿಕೊಳಲಿ ಕರ್ನಾಟಕದಲ್ಲಿ ಜಾತ್ಯತೀತ ಸರ್ಕಾರ ಅಧಿಕಾರಕ್ಕೆ ಬರಲುಬ ಕೆಲ ಕಾಂಗ್ರೆಸ್ಸಿಗರಿಗೆ ಇಷ್ಟವಿಲ್ಲ ಹೀಗಾಗಿ ಅವರು ಸಮಿಶ್ರ ಸರ್ಕಾರವನ್ನು ಪತನಗೊಳಿಸಿದರು ಎಂದು ಆರೋಪಿಸಿದರು.

# ಎಐಸಿಸಿ ಅಧ್ಯಕ್ಷ ಖರ್ಗೆ ಕುಟುಂಬದ ಹತ್ಯೆಗೆ ಬಿಜೆಪಿ ನಾಯಕರ ಸಂಚು: ಕಾಂಗ್ರೆಸ್ ನಾಯಕರ ಆರೋಪ



ಬೆಂಗಳೂರು: ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿದ್ದಂತೆ ಕಾಂಗ್ರೆಸ್, ಬಿಜೆಪಿ ನಾಯಕರ ವಾಕ್ಸಮರ ಮುಗಿಲು ಮುಟ್ಟಿದೆ. ಆರೋಪ, ಪ್ರತ್ಯಾರೋಪಗಳ ಮಧ್ಯೆ ಕೊಲೆ ಬೆದರಿಕೆಗಳು ಕೇಳಿ ಬಂದಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಕುಟುಂಬದ ಹತ್ಯೆಗೆ ಸಂಚು ರೂಪಿಸಿದ್ದಾರೆ ಎಂದಿರುವ ಕಾಂಗ್ರೆಸ್ ನಾಯಕರು ಆಡಿಯೋ ಸಾಕ್ಷಿಯನ್ನು ಬಿಡುಗಡೆ ಮಾಡಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹಾಗೂ ಪವನ್ ಖೇರಾ ಮಹತ್ವದ ಸುದ್ದಿಗೋಷ್ಠಿ ನಡೆಸಿದರು.

ಈ ವೇಳೆ ಬಿಜೆಪಿ ವಿರುದ್ಧ ಗಂಭೀರ ಆರೋಪ ಮಾಡಿದ ಕೈ ನಾಯಕರು, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಕುಟುಂಬ ಆತಂಕದಲ್ಲಿದೆ. ಬಿಜೆಪಿ ಅಭ್ಯರ್ಥಿ ಮಣಿಕಂಠ ರಾಥೋಡ್ ಅವರು ಖರ್ಗೆ ಕುಟುಂಬದ ಹತ್ಯೆಯ ಬಗ್ಗೆ ಸಂಭಾಷಣೆ ಮಾಡಿರೋ ಆಡಿಯೋವನ್ನು ರಿಲೀಸ್ ಮಾಡಿದ್ದಾರೆ.

ಬಳಿಕ ಮಾತನಾಡಿದ ರಣದೀಪ್ ಸಿಂಗ್ ಸುರ್ಜೇವಾಲಾ, ಆಡಿಯೋದಲ್ಲಿ ಮಣಿಕಂಠ ರಾಥೋಡ್ ಅವರು ಮಲ್ಲಿಕಾರ್ಜುನ ಖರ್ಗೆ ಹಾಗೂ ಅವರ ಹೆಂಡತಿ, ಮಕ್ಕಳನ್ನ ಕೊಲ್ಲುತ್ತೇನೆ ಎಂದಿದ್ದಾರೆ. ಇದು ತುಂಬಾ ಅಪಾಯಕಾರಿ ಬೆಳವಣಿಗೆ. ಮಲ್ಲಿಕಾರ್ಜುನ ಖರ್ಗೆಯವರ ಕುಟುಂಬ ಆತಂಕದಲ್ಲಿದೆ. ಪ್ರಧಾನಿ ಮೋದಿ, ಸಿಎಂ ಬಸವರಾಜ ಬೊಮ್ಮಾಯಿ ಇದನ್ನ ಗಂಭೀರವಾಗಿ ಪರಿಗಣಿಸಿಲ್ಲ. ದಲಿತ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಹತ್ಯೆಗೆ ಬಿಜೆಪಿ ನಾಯಕರು ಹೊರಟಿದ್ದಾರೆ ಎಂದು ಸುರ್ಜೇವಾಲಾ ಆರೋಪಿಸಿದ್ದಾರೆ.



## ನಮ್ಮ ನಡೆ ಮತಗಟ್ಟೆಯ ಕಡೆ ಕಾರ್ಯಕ್ರಮ

ಸವದತ್ತಿ: ನಮ್ಮ ನಡೆ ಮತಗಟ್ಟೆಯ ಕಡೆ ಕಾರ್ಯಕ್ರಮದ ಅಂಗವಾಗಿ ಸವದತ್ತಿ ತಾಲ್ಲೂಕಾ ಸ್ವೀಪ್ ಸಮಿತಿ ವತಿಯಿಂದ ಸವದತ್ತಿ ತಾಲೂಕ ಪಂಚಾಯತದಲ್ಲಿರುವ ವಿಕಲಚೇತನರ ವಿಶೇಷ ಮತಗಟ್ಟೆ ಕೇಂದ್ರದಲ್ಲಿ ಚುನಾವಣಾ ಅಧಿಕಾರಿಗಳಾದ ಡಾ. ರಾಜೀವ ಕೋಲೇರ ಧ್ವಜಾರೋಹಣ ನೇರವೇರಿಸಿ ಪ್ರತಿಜ್ಞಾ ವಿಧಿಯನ್ನು ಭೋದಿಸಿದರು.

ಈ ಸಂದರ್ಭದಲ್ಲಿ ಖ್ಯಾತ ಗಾಯಕ ವಿಜಯ ಪ್ರಕಾಶ ಅವರ ಮತದಾನ ಗೀತೆಯನ್ನು ಮೊಳಗಿಸಲಾಯಿತು ಹಾಗೂ ಕಲಾ ತಂಡದವರು ಚುನಾವಣೆ ಗೀತೆಗಳನ್ನು ಹಾಡಿದರು.

ಬಳಿಕ ತಾಲೂಕ ಪಂಚಾಯತ ಆವರಣದಲ್ಲಿ ಕಾಲ್ನಡಿಗೆ ಜಾಥಾ ಹಾಗೂ ವಿಶೇಷ ಚೇತನರ ಬೈಕ್ ರ್ಯಾಲಿಗೆ ಚುನಾವಣಾ ಅಧಿಕಾರಿಗಳಾದ ಡಾ. ರಾಜೀವ ಕೋಲೇರ ಚಾಲನೆಯನ್ನು ನೀಡಿದರು. ತಾಲೂಕ ಪಂಚಾಯತ ಆವರಣದಿಂದ ಆರಂಭವಾದ ಕಾಲ್ನಡಿಗೆ ಜಾಥಾ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಮತದಾರರಿಗೆ ಮತದಾನದ ಜಾಗೃತಿ ಮೂಡಿಸಿ ಕರಪತ್ರಗಳನ್ನು ನೀಡಲಾಯಿತು. ಬಳಿಕ ತಾಲೂಕಾ ಕ್ರೀಡಾಂಗಣದಲ್ಲಿರುವ ಪಿಂಕ್ ಮತಗಟ್ಟೆ ಕೇಂದ್ರದಲ್ಲಿ ಧ್ವಜಾರೋಹಣ ನೆರವೇರಿಸಿದರು.

ಬಳಿಕ ಪಟ್ಟಣದ ಬಸ್ ನಿಲ್ದಾಣದಲ್ಲಿ ಮತದಾರರಿಗೆ ಮತದಾನದ ಕರ ಪತ್ರಗಳನ್ನು ನೀಡಿ ಪ್ರತಿಜ್ಞಾ ವಿಧಿಯನ್ನು ಭೋದಿಸಲಾಯಿತು.

ಈ ಸಂದರ್ಭದಲ್ಲಿ ಸಹಾಯಕ ಚುನಾವಣಾ ಅಧಿಕಾರಿಗಳಾದ ಜಿ.ಬಿ ಜಕ್ಕನಗೌಡರ, ತಾಪಂ ಸಹಾಯಕ ನಿರ್ದೇಶಕರು (ಪಂ.ರಾ) ಆರ್ ಎ ಪಾಟೀಲ, ತಾಪಂ ಸಹಾಯಕ ನಿರ್ದೇಶಕರು (ಗ್ರಾ.ಉ) ರಾಮಪ್ಪ ರಕ್ಕಸಗಿ, ತಾಲೂಕಾ ಆರೋಗ್ಯ ಅಧಿಕಾರಿ ಮಹೇಶ ಚಿತ್ತರಗಿ, ತಾಲೂಕಾ ಮಟ್ಟದ ಅಧಿಕಾರಿಗಳು, ತಾಪಂ ವ್ಯವಸ್ಥಾಪಕ ಜಿ. ಎಸ್ ಬಡೆಮ್ಮಿ, ತಾಪಂ ಸಿಬ್ಬಂದಿಗಳಾದ ಮಲೀಕಜಾನ ಮೋಮಿನ, ನಾಗರಾಜ ಬೆಹರೆ, ಬಸವರಾಜ ಹಂಕಪ್ಪನವರ, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ವಿಶೇಷ ಚೇತನರು ಇನ್ನಿತರರು ಉಪಸ್ಥಿತರಿದ್ದರು.

## ಗುಂಡಿನ ದಾಳಿ: ಕಾರ್ಪೊರೇಟರ್ ಪತಿಯ ಬರ್ಬರ ಹತ್ಯೆ



ವಿಜಯಪುರ: ವಿಧಾನ ಸಭಾ ಚುನಾವಣೆಗೆ ಕೇವಲ ನಾಲ್ಕು ದಿನಗಳು ಮಾತ್ರ ಬಾಕಿಯಿರುವಾಗಲೇ ವಿಜಯಪುರದಲ್ಲಿ ಹಾಡಹಗಲೇ ಗುಂಡಿನ ದಾಳಿ ನಡೆದಿದ್ದು, ಮಹಿಳಾ ಕಾರ್ಪೊರೇಟ–ರ್ ಪತಿಯನ್ನು ಗುಂಡಿಟ್ಟು ಹತ್ಯೆ ಮಾಡಿರುವ ಘಟನೆ ನಡೆದಿದೆ.

ಹೈದರ್ ಅಲಿ ನದಾಫ್ ಗುಂಡಿನ ದಾಳಿಗೆ ಬಲಿಯಾದವರು. ಹೈದರ್ ವಾರ್ಡ್ ನಂಬರ್ 19ರ ಪಕ್ಷೇತರ ಪಾಲಿಕೆ ಸದಸ್ಯೆ ನತಾಶ್ ಅವರ ಪತಿ ಎಂದು ತಿಳಿದುಬಂದಿದೆ.

ಹೈದರ್ ಅಲಿ ನದಾಫ್ ಮೇಲೆ ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿ ಪರಾರಿಯಾಗಿದ್ದಾರೆ. ರಕ್ತದ ಮಡುವಲ್ಲಿ ಬಿದ್ದಿದ್ದ ಹೈದರ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಜಲನಗರ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದ್ದಾರೆ.

## ಇಂದು ಮಂಗಳೂರಿಗೆ ಪ್ರಿಯಾಂಕಾ ಗಾಂಧಿ ಭೇಟಿ



ಮಂಗಳೂರು: ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಇದೇ 7ರಂದು ಮಧ್ಯಾಹ್ನ 1ಕ್ಕೆ ಮೂಲ್ಕಿ ಸಮೀಪದ ಕೊಳ್ನಾಡು ಮೈದಾನದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಪರ ಪ್ರಚಾರ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಮಂಜುನಾಥ ಭಂಡಾರಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮ0ಗಳೂರು ನಗರ ಉತ್ತರ, ಮ0ಗಳೂರು ನಗರ ದಕ್ಷಿಣ, ಮೂಡುಬಿದಿರೆ ವಿಧಾನಸಭಾ ಕ್ಷೇತ್ರಗಳಿ0ದ 50 ಸಾವಿರಕ್ಕೂ ಹೆಚ್ಚು ಜನರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಕರಾವಳಿ ಜಿಲ್ಲೆಗೆ ಇದೇ ಮೊದಲ ಬಾರಿ ಆಗಮಿಸುತ್ತಿದ್ದು ಪ್ರಿಯಾಂಕಾ ಅವರಿಗೆ ಭವ್ಯ ಸ್ವಾಗತ ಕೋರಲಾಗುವುದು ಎಂದರು.

ಕರಾವಳಿಯೂ ಸೇರಿದಂತೆ ರಾಜ್ಯದಲ್ಲಿ ಕಾಂಗ್ರೆಸ್ ಅತಿ ಹೆಚ್ಚು ಸ್ಥಾನಗಳನ್ನು ಪಡೆದು ಬಹುಮತದ ಸರ್ಕಾರ ರಚನೆ ಮಾಡಲಿದೆ. ಕಾಂಗ್ರೆಸ್ ಸರ್ಕಾರದಿಂದ ಮಾತ್ರ ರಾಜ್ಯದ ಅಭಿವೃದ್ಧಿ ಸಾಧ್ಯ.

ಕರಾವಳಿ ಭಾಗಕ್ಕೆ ರೂಪಿಸಿರುವ ಪ್ರತ್ಯೇಕ ಪ್ರಣಾಳಿಕೆಯಲ್ಲಿಯ ಹತ್ತು ಅಂಶಗಳನ್ನು ಹಾಗೂ 6 ಗ್ಯಾರಂಟಿ ಯೋಜನೆಗಳನ್ನು ಈಡೇರಿಸಲು ಕಾಂಗ್ರೆಸ್ ಬದ್ಧ. ಜನಪರವಾದ, ಜನರು ಮೆಚ್ಚುವ ಸರ್ಕಾರವನ್ನು ಕಾಂಗ್ರೆಸ್ ನೀಡಲಿದೆ ಎಂದರು.

ಎಐಸಿಸಿ ವಕ್ತಾರ ಚರಣ್ ಸಿಂಗ್ ಸಪ್ರಾ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹ–ರೀಶ್ ಕುಮಾರ್, ಸಿಡಬ್ಲುಸಿ ಸದಸ್ಯ ಡಾ.ಅಜಯ ಕುಮಾರ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಪದ್ಮರಾಜ್, ಸಂತೋಷ ಶೆಟ್ಟಿ ಪತ್ರಿಕಾಗೋಷ್ಠಿಯಲ್ಲಿದ್ದರು.

# ಗ್ಯಾರೆಂಟಿ ಇಲ್ಲದ ಕಾಂಗ್ರೆಸ್: ಕೇಂದ್ರ ಗೃಹ ಸಚಿವ ಅಮೀತ ಶಾ



ಸವದತ್ತಿ : ಅಯೋಧ್ಯೆಯಲ್ಲಿ ಭವ್ಯವಾದ ಶ್ರೀರಾಮ ಮಂದಿರವನ್ನು 2024ರಲ್ಲಿ ಉದ್ಘಾಟನೆಗೊಳಿಸಲಾಗುತ್ತಿದ್ದು, ಈಗಲೆ ಟಿಕೆಟ್ ರಿಸರವೇಶನ್ ಮಾಡಿಟ್ಟುಕೊಳ್ಳಿ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ನಡೆದ ಬಿಜೆಪಿ ಪಕ್ಷದ ಚುನಾವಣಾ ಪ್ರಚಾರಾರ್ಥ ಹಮ್ಮಿಕೊಂಡ ಬೃಹತ್ ಸಮಾವೇಶದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಬೆಳಗಾವಿಯಲ್ಲಿರುವ 18 ಮತಕ್ಷೇತ್ರಗಳಲ್ಲಿ ಕಳೆದ ಬಾರಿ 11 ಕ್ಷೇತ್ರಗಳಲ್ಲಿ ಬಿಜೆಪಿ ಪಕ್ಷವನ್ನು ಜನತೆ ಗೆಲ್ಲಿಸಿಕೊಟ್ಟಿದ್ದು, ಈ ಬಾರಿ ಬೆಳಗಾವಿಯ 18 ಕ್ಷೇತ್ರಗಳಲ್ಲಿ ಬಿಜೆಪಿ ಪಕ್ಷವನ್ನು ಗೆಲ್ಲಿಸುವ ಮೂಲಕ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಸಹಕಾರ ನೀಡಬೇಕೆಂದರು. ಮೇ.13ರಂದು ಕರ್ನಾಟಕದಲ್ಲಿ ಪೂರ್ಣ ಪ್ರಮಾಣದಲ್ಲಿ ಬಿಜೆಪಿ ಸರಕಾರ ರಚನೆಯಾಗಲಿದೆ ಎಂದರು.

ಎರಡು ಗಂಟೆ ತಡವಾಗಿ ಆಗಮಿಸಿದ ಅಮಿತ್ ಶಾ ನೇರವಾಗಿ ವೇದಿಕೆಯ ಮೇಲೆ ಹೋಗಿ ಭಾಷಣ ಆರಂಭಿಸಿ ತಡವಾಗಿ ಆಗಮಿಸಿದ್ದಕ್ಕೆ ಕ್ಷಮೆಯಾಚಿಸಿದರು. 2024ರಲ್ಲಿ ಬಜರಂಗದಳ ನಿಷೇಧ ಮಾಡೋ ಮಾತನ್ನು ಆಡುತ್ತಿರುವ ಕಾಂಗ್ರೆಸ್ ಪಕ್ಷ ಅದರ ಪರಿಣಾಮ ಎದುರಿಸಲಿದೆ. ದೇಶ ವಿರೋಧಿ ಕೆಲಸ ಮಾಡುವವರಿಗೆ ಜೈಲಿನ ಕಂಬಿಯ ಹಿಂದೆ ಕಳಿಸಲಾಗುವದು ಎಂದರು.

ಬಸವಣ್ಣನವರ ಸಿದ್ಧಾಂತದ ಮೇಲೆ ಕೆಲಸ ಮಾಡುವವರಿಗೆ ಕಾಂಗ್ರೆಸ್ ಅಪಮಾನ ಮಾಡುತ್ತಿದ್ದು, ಭ್ರಷ್ಟಾಚಾರವನ್ನು ಒಂದು ಸಮುದಾಯಕ್ಕೆ ಹೋಲಿಸುವುದು ಎಷ್ಟು ಸರಿ ಎಂದರು. ಅಂದು ಇಂದಿರಾ ಗಾಂಧಿಯವರು ನಿಜಲಿಂಗಪ್ಪನವರಿಗೆ ಹಾಗೂ ರಾಜೀವ ಗಾಂಧಿಯವರು ವೀರೇಂದ್ರ ಪಾಟೀಲ–ರಿಗೆ ಅಪಮಾನ ಮಾಡಿಕೊಂಡು ಬಂದಿದ್ದು, ಆದರೆ ಬಿಜೆಪಿ ಸರಕಾರ ಯಡಿಯೂರಪ್ಪ ಮತ್ತು ಬೊಮ್ಮಾಯಿಯವರನ್ನು ಸಿಎಮ್ ಮಾಡುವ ಮೂಲಕ ಲಿಂಗಾಯತರಿಗೆ ಸನ್ಮಾನ ಮಾಡೋ ಕೆಲಸ ಮಾಡಿದೆ ಎಂದರು.

ಎರಡು ಬಾರಿ ಜೀವಾವಧಿ ಶಿಕ್ಷೆಗೆ ಗು–ರಿಯಾಗಿದ್ದ ಏಕೈಕ ಸ್ವಾತಂತ್ರ್ಯ ಹೋರಾಟಗಾರ ವೀರ ಸಾವರ್ಕರವರಾಗಿದ್ದು, ಅವರಿಗೆ ಅಪಮಾನ ಮಾಡುವ ಕಾಂಗ್ರೆಸ್ ಪಕ್ಷದ ರಾಹುಲ್ ಬಾಬಾ ನೀವು 10 ಜನ್ಮ ಜೀವಂತ ಇದ್ದರೂ ಸಾವರ್ಕರರಂತಹ ಬಲಿದಾನ ನೋಡೋಕ್ಕಾಗುವದಿಲ್ಲ ಎಂದರು.

ಕೇಂದ್ರ ಮತ್ತು ರಾಜ್ಯದ ಡಬಲ್ ಇಂಜಿನ್ ಸರಕಾರಗಳು ಅನೇಕ ಜನಪರವಾದಂತ ಯೋಜನೆಗಳನ್ನು ಜಾರಿಗೆ ತಂದಿದ್ದು, ಅಂ–ದು ರೈತ ಸಮ್ಮಾನ ಯೋಜನೆಗೆ ರೈತರ ಪಟ್ಟಿ ಕೊಡುವಲ್ಲಿಯೂ ಕಾಂಗ್ರೆಸ್ ಮತ್ತು ಜೆಡಿಎಸ್ ಮೈತ್ರಿ ಸರಕಾರ ಹಿಂದೇಟು ಹಾಕಿರುವದನ್ನು ಗಮನಿಸಬೇಕಿದೆ ಎಂದರು. ಬರುವಂತ ಮೂರು ವರ್ಷಗಳಲ್ಲಿ ರೈತರಿಗೆ ಪ್ರತಿ ವರ್ಷ ಮೂರು ಬೆಳೆಗಳನ್ನು ತೆಗೆಯುವಷ್ಟು ನೀರು ಕೊಡಲಾಗುವುದು ಎಂದರು. ಉತ್ತರ ಕರ್ನಾಟಕದ ರೈತರೊಂದಿಗೆ ಪ್ರಧಾನ ನರೇಂದ್ರ ಮೋದಿ ಬೆಟ್ಟದಂತೆ ನಿಂತಿ–ದ್ದು, ಅಭಿವೃದ್ಧಿಪರವಾಗಿರುವಂತ ವಿಶೇಷ ಯೋಜನೆಗಳನ್ನು ಉತ್ತರ ಕರ್ನಾಟಕಕ್ಕೆ ನೀಡಲಾಗುತ್ತಿದೆ ಎಂದರು.

ಕಾಂಗ್ರೆಸ್ ಪಕ್ಷಕ್ಕೆ ಚುನಾವಣೆ ಬಂದಾಗ ಮಾತ್ರ ಮರಾಠರ ನೆನಪು ಆಗುತ್ತಿದ್ದು, ಬಿಜೆಪಿ ಸರಕಾರವು ಮರಾಠ ಸಮಾಜಕ್ಕೆ ಅಭಿವೃದ್ಧಿ ಪ್ರಾಧಿಕಾರವನ್ನು ಮಾಡುವ ಮೂಲಕ ಸಮಾಜದ ಜನರ ಕಾಳಜಿಯನ್ನು ಬಯಸಿದೆ ಎಂದರು.

ಸಂವಿಧಾನ ಬಾಹಿರವಾಗಿ ಮುಸ್ಲಿಂರಿಗೆ ಶೇ.4 ರಷ್ಟು ಮೀಸಲಾತಿಯನ್ನು ಕಾಂಗ್ರೆಸ್ ಪಕ್ಷ ನೀಡಿರುವದನ್ನು ತೆಗೆದು ಹಾಕಿ ಆ ಮೀಸಲಾತಿಯನ್ನು ಪಂಚಮಸಾಲಿ ಮತ್ತು ಒಕ್ಕಲಿಗರಿಗೆ ನೀಡಿರುವುದು ಬಿಜೆಪಿ ಸರಕಾರ ಎಂದರು. ವೋಟ್ ಬ್ಯಾಂಕ್ ರಾಜಕಾರಣಕ್ಕೆ ಕಾಂಗ್ರೆಸ್ ನಿರಂತರ ತುಷ್ಟಿಕರಣ ಮಾಡುತ್ತಿದ್ದು, ಕಾಂಗ್ರೆಸ್ ನಾಯಕರೆ ಕಿವಿಯೊಡ್ಡಿ ಕೇಳಿ ಈ ಚುನಾವಣೆಯಲ್ಲಿ ನಿಮ್ಮ ಸರಕಾರ ಬರೋದಿಲ್ಲ ಎಂದರು. ಮೀಸಲಾತಿಯನ್ನು ತೆಗೆದು ಹಾಕುತ್ತೀರಿ ಎಂದು ಹೇಳುತ್ತಿದ್ದು, ನೀವು ಅಧಿಕಾರಕ್ಕೆ ಬರಲ್ಲ ಅಂದ ಮೇಲೆ ಮೀಸಲಾತಿ ತೆಗೆದು ಹಾಕಲು ಹೇಗೆ ಸಾಧ್ಯ ಎಂದರು.

ಬಿಜೆಪಿ ಪ್ರಣಾಳಿಕೆಯಲ್ಲಿ ಗಣೇಶ ಚತುರ್ಥಿ, ಯುಗಾದಿ, ದೀಪಾವಳಿಗೆ ಮೂರು ಉಚಿತ ಸಿಲಿಂಡರ್ ನೀಡೋದಾಗಿ ಘೋಷಣೆ ಮಾಡಲಾಗಿದೆ ಎಂದರು.

ಸಮಾನ ನಾಗರೀಕ ಹಕ್ಕು ತರುವ ಭರವಸೆ ಬಿಜೆಪಿ ನೀಡುತ್ತಿದೆ. ಕಿತ್ತೂರು ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರ ರಚನೆ ಹಾಗೂ ಬೆಳಗಾವಿಯಲ್ಲಿ ಕ್ಯಾನ್ಸರ್ ಆಸ್ಪತ್ರೆ ಸ್ಥಾಪನೆ ಮಾಡಲು ಘೋಷಣೆ ಮಾಡಲಾಗಿದೆ ಎಂದರು.

ಈ ಬಾರಿ ಸವದತ್ತಿ ಯಲ್ಲಮ್ಮಾ ಮತಕ್ಷೇತ್ರದಿಂದ ಸಹೋದರಿ ರತ್ನಾ ಮಾಮನಿಯವರನ್ನು ಆಯ್ಕೆ ಮಾಡಿ ಕಳಿಸಬೇಕೆಂದರು.

ಬಿಜೆಪಿ ಅಭ್ಯರ್ಥಿ ರತ್ನಾ ಆನಂದ ಮಾಮನಿ ಅಮಿತ್ ಶಾ ತೆರಳಿದ ನಂತರ ಮಾತನಾಡಿ, ತಮಗೆ ರಾಜಕಾರಣದಲ್ಲಿ ಎದುರಾದ ಕಷ್ಟಗಳನ್ನು ನೆನೆದು ಕಣ್ಣೀರು ಹಾಕಿದರು. ನನಗೆ ಕಷ್ಟಗಳನ್ನು ತಂದವ–ರಿಗೆ ಮೇ.13ಕ್ಕೆ ತಕ್ಕ ಉತ್ತರ ನೀಡುತ್ತೇನೆ ಎಂದ ಅವರು, ಯಾರೋ ಒಬ್ಬರು ಎಲ್ಲೋ ಕುಳಿತು ರಾಜಕೀಯ ಮಾಡಿದರೆ ಆಗೋಲ್ಲ. ಬೇರೆ ತಾಲೂಕಿನವರು ಇಲ್ಲಿ ಬಂದು ರಾಜ–ಕೀಯ ಮಾಡೋಕೆ ಬಿಡೋಲ್ಲ ಎಂದು ಪರೋಕ್ಷವಾಗಿ ಸತೀಶ ಜಾರಕಿಹೊಳಿಯವ–ರಿಗೆ ಟಾಂಗ್ ಕೊಟ್ಟರು.

ನಾಮಪತ್ರ ಸಲ್ಲಿಕೆ ವೇಳೆ ನನಗೆ ಆಗಿರುವ ಕಷ್ಟ ಅಷ್ಟಿಷ್ಟಲ್ಲ. ಒಬ್ಬ ಹೆಣ್ಣು ಮಗಳ ಮೇಲೆ ಪೌರುಷ ತೋರುತ್ತಿದ್ದಾರೆ. ಹುಲಿಯಂತ ನಮ್ಮ ಯಜಮಾನರು ಇದ್ದಾಗ ತಮ್ಮ ಪೌರುಷ ತೋರಿಸಬೇಕಿತ್ತು ಎಂದರು.

ಕೇಂದ್ರ ಸಚಿವ ಕಪೀಲ ಪಾಟೀಲ, ಸಂ–ಜಯ ಪಾಟೀಲ, ಸಂಸದೆ ಮಂಗಲಾ ಅಂಗಡಿ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಬಸಯ್ಯ ಹಿರೇಮಠ, ವಿರುಪಾಕ್ಷ ಮಾಮನಿ, ಗಂಗಮ್ಮತಾಯಿ ಮಾಮನಿ, ರುದ್ರಣ್ಣ ಚಂದರಗಿ, ಅಜೀತಕುಮಾರ ದೇಸಾಯಿ, ವಿನಯಕುಮಾರ ದೇಸಾಯಿ, ಜಗದೀಶ ಶಿಂತ್ರಿ, ಬಸವರಾಜ ಕಾರದಗಿ, ಜಗದೀಶ ಹನಸಿ, ಎಫ್.ಎಸ್.ಸಿದ್ದನಗೌಡರ, ಈರಣ್ಣ ಚಂದರಗಿ ಉಪಸ್ಥಿತರಿದ್ದರು.

## ಮಾಜಿ ಸೈನಿಕರ ಸಂಘದ ಸದಸ್ಯರು ಬಿಜೆಪಿ ಸೇರ್ಪಡೆ



ಕಾಗವಾಡ: ಬಿಜೆಪಿ ಅಭ್ಯರ್ಥಿ ಶ್ರೀಮಂತ ಪಾಟೀಲರ ಅಭಿವೃದ್ಧಿ ಹಾಗೂ ಜನಪರ ಕಾಳಜಿ ಮೆಚ್ಚಿ ಕಾಗವಾಡ ತಾಲೂಕಿನ ಮಾಜಿ ಸೈನಿಕರ ಸಂಘದ ಸದಸ್ಯರು ಬಿಜೆಪಿ ಸೇರ್ಪಡೆಯಾದರು.

ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಸೈನಿಕ ಸಂಘದ ಅಧ್ಯಕ್ಷ ಶ್ರೀಮಂತ ಸೊಂದಕರ ಮಾತನಾಡಿ, ಕಾಗವಾಡ ಮತಕ್ಷೇತ್ರದ ಅಭಿವೃದ್ಧಿ ಗಾಗಿ ನಿರಂತರವಾಗಿ ಶ್ರಮಿಸುತ್ತಿರುವ ಶ್ರೀಮಂತ ಪಾಟೀಲರ ಕಾರ್ಯವೈಖರಿ ಗಮನಿಸಿದ ದೇಶದ ಸುರಕ್ಷತೆಗಾಗಿ ಸೈನಿಕರಾಗಿ ದುಡಿದ ನಾವು ನಮ್ಮ ಸಂಘದ ಸದಸ್ಯರೆಲ್ಲರೂ ಶ್ರೀಮಂತ ಪಾಟೀಲ ನೇತೃತ್ವದಲ್ಲಿ ಬಿಜೆಪಿ ಸೇರ್ಪಡೆ ಗೊಂಡಿದ್ದೇವೆ ಎಂದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರ ದೇಶದ ಏಕತೆಗಾಗಿ ಮತ್ತು ರಕ್ಷಣೆಗಾಗಿ ಹಗಲಿರುಳು ಶ್ರಮಿಸುತ್ತಿದೆ. ಸೈನಿಕರಿಗೆ ದೇಶದ ಸುರಕ್ಷತೆಯೇ ಪ್ರಮುಖ ವಿಷಯ ಎಂದ ಅವರು ಶ್ರೀಮಂತ ಪಾಟೀಲರು ನೀರಿಲ್ಲದ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಿದ ಧೀಮಂತ ನಾಯಕ ಇಂತಹ ನಾಯಕರಿಗೆ ಸಹಕಾರ ನೀಡುವ ಉದ್ದೇಶದಿಂದ ನಾವೆಲ್ಲ ಬಿಜೆಪಿ ಸೇರ್ಪಡೆಯಾಗುತ್ತಿರುವೆ ಎಂದರು.

ಮಾಜಿ ಸೈನಿಕರಾದ ಮಹಾದೇವ ಜಂಗಲಗಿ, ಕುಮಾರ ಮೋಳೆಕರ, ಮಹಾವೀರ ಬೋರಗಾಂವೆ, ಹಣಮಂತ ಹಳ್ಳೊಳ್ಳಿ, ಭೀಮು ಅಟಪಟಕರ, ದುಂಡಪ್ಪ ಕಡಕೋಳ, ಸಿದ್ದುಬಾ ರೂಪನವರ, ಗಣಪತಿ ಸಂಭೋಜಿ, ರಾಜು ಕಾವೇರಿ, ಸತ್ಯಪ್ಪಾ ಕಾಳೇಲಿ, ಪದ್ಮಾಕರ ಕಟ್ಟಿಕರ, ಧೋಂಡಿಬಾ ಅಟಪಟಕರ, ಬಾಬಾಸಾಹೇಬ ಗೇಂಡ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ವಿಶ್ವಕರ್ಮ ಸಮಾಜದ ಬಂದುಗಳಿಂದ ರಮೇಶ ಜಾರಕಿಹೋಳಿಗೆ ಬೆಂಬಲ



ಗೋಕಾಕ: ವಿಶ್ವಕರ್ಮ ಸಮಾಜದ ಬಾಬು ಪತ್ತಾರ ನೇತ್ರತ್ವದಲ್ಲಿ ತಾಲೂಕಿನ ಎಲ್ಲಾ ವಿಶ್ವಕರ್ಮ ಸಮಾಜದ ಬಂದುಗಳಿಂದ ರಮೇಶ ಜಾರಕಿಹೋಳಿಗೆ ಬೆಂಬಲ ಹೌದು ವಿಧಾನಸಭೆ ಸಭೆ ಚುನಾವಣೆ ಸಮೀಸುತ್ತಿದ್ದಂತೆ ಎಲ್ಲಾ ಸಮಾಜದ ಮುಖಂಡರುಗಳು ಪ್ರಚಾರ ಮಾಡಲು ಸನ್ನದ್ದರಾಗಿದ್ದಾರೆ ಇಂದು ಗೋಕಾಕ ಮತಕ್ಷೇತ್ರದಲ್ಲಿ ವಿಶ್ವಕರ್ಮ ಸಮಾಜದ ಬಂಧುಗಳಿಂದ ಚುನಾವಣೆ ಪ್ರಚಾರದಲ್ಲಿ ರಮೇಶ ಜಾರಕಿಹೋಳಿ ಯವರಿಗೆ ಏಕಮತವಾಗಿ ಬೆಂಬಲ ನೀಡುವ ಮೂಲಕ ಮನೆ ಮನೆಗೆ ಹಾಗೂ ಹಳ್ಳಿ ಹಳ್ಳಿಗೆ ಹೋಗಿ ಪ್ರಚಾರ ಕೈಗೊಂಡಿದ್ದರು.

ಬಿಜೆಪಿ ಮಾಡಿದ ಕೆಲಸ ವಿಶ್ವಕರ್ಮರಿಗೆ ಹಲವು ಯೋಜನೆ ಗಳೊಂದಿಗೆ ವಿಶ್ವಕರ್ಮ ಸಮಾಜ ಗುರುತುಪಡಿಸುವಲ್ಲಿ ಬಿಜೆಪಿ ಯಶಸ್ವಿಯಾಗಿದೆ ಎಂದು ಬಾಬು ಪತ್ತಾರ ಪ್ರಚಾರ ಸಂದರ್ಭದಲ್ಲಿ ಸಮಾಜದ ಬಂದು ಬಗಿನಿಯ–ರಿಗೆ ವಿಷಯ ತಿಳಿಸಿ ಗೋಕಾಕ ಮತಕ್ಷೇತ್ರದ ಬಿಜೆಪಿ ಅಭ್ಯರ್ಥಿ ರಮೇಶ ಜಾರಕಿಹೊಳಿಗೆ ಬೆಂಬಲ ನೀಡಿ ಬಹುಮತಗಳಿಂದ ಆಯ್ಕೆ ಮಾಡಬೇಕೆಂದು ಹೇಳಿದ್ದಾರೆ. ಪ್ರಚಾರ ಸಂದರ್ಭದಲ್ಲಿ ಅಂಭಿರಾವ ಪಾಟೀಲರು ಭೆಟಿ ನೀಡಿ ಸಮಾಜದ ಮುಖಂಡರಿಗೆ ಧನ್ಯವಾದಗಳನ್ನ ತಿಳಿಸಿದ್ದಾರೆ.ನಂತರ ಶಾಲು ಮಾಲೆ ಹಾಕುವ ಮುಖಾಂತರ ರಮೇಶ ಜಾರಕಿಹೊಳಿಗೆ ಜೈ ಅಂದಿದ್ದಾರೆ.ಬೆಂಗಳೂ–ರಿನಿಂದ ಬಂದು ಹೈವೊಲ್ಟೇಜ ಮತಕ್ಷೇತ್ರವಾದ ಗೋಕಾಕನಲ್ಲಿ ಮತ ಭೆಟೆಗೆ ಸಕಲ ಸಿದ್ದತೆ ಮಾಡಿಕೊಂಡು ಹಲವೂ ಗ್ರಾಮದ ವಿಶ್ವಕರ್ಮ ಸಮಾಜದ ಮುಖಂಡರಿಗೆ ಪ್ರತ್ಯೇಕವಾಗಿ ಬಿಜೆಪಿಗೆ ಮತ ಹಾಕುವಂತೆ ಬೇಡಿಕೊಂಡಿದ್ದಾರೆ. ಅದೇ ರೀತಿ ಎಲ್ಲಾ ವಿಶ್ವಕರ್ಮ ಸಮಾಜದ ಮುಖಂಡರಿಗೆ ಎಲ್ಲಾ ರೀತಿಯ ಸರ್ಕಾರದ ಸೌಲಭ್ಯಗಳನ್ನು ಒದಗಿಸುತ್ತೆವೆ ಇನ್ನೂ ಮುಂದಿನ ಹಂತದಲ್ಲಿ ನಿರುದ್ಯೋಗ ಯುವಕರಿಗೆ ಕೆಲಸ, ಬಡಿಗೇರ, ಕಂಬಾರ,ಪತ್ತಾರ, ಸುತಾರ, ಹೀಗೆ ಸಾಲ ಸೌಲಭ್ಯ ಒದಗಿಸುತ್ತೆವೆಂದು ಬಾಬು ಪತ್ತಾರ ಹೇಳಿದ್ದಾರೆ.

ಈ ಸಂದರ್ಭದಲ್ಲಿ ವಿಶ್ವಕರ್ಮ ಸಮಾಜದ ನಿಗಮ ಮಂಡಳಿ ಅಧ್ಯಕ್ಷರಾದ ಬಾಬು ಪತ್ತಾರ. ಹಾಗೂ ವಿಶ್ವಕರ್ಮ ಸಮಾಜದ ಏಳಿಗೆಗಾಗಿ ಹಗಲಿರುಳು ಶ್ರಮಿಸಿ ಬೆಂಗಳೂರು ಮಂಗಳೂರು ಕಲಬುರಗಿ ವಿಜಯಪುರ ಬೆಳಗಾವಿ ಹುಬ್ಬಳ್ಳಿ ಧಾರವಾಡ ಹೀಗೆ ಎಲ್ಲಾ ಜಿಲ್ಲೆಯ ಸಮಸ್ಯೆಗೆ ಒಡೊಡಿ ಬರುವ ಏಕೈಕ ಸಮಾಜದ ಹೋರಾಟಗಾರ ಹಾಗೂ ವಿಶ್ವಕರ್ಮ ಸಮಾಜದ ಹಲವೂ ಸಭೆಗಳಿಗೆ ಮೂಲ ಕಾರ್ಯಕರ್ತರಾದ ಸಂತೋಷ ಪತ್ತಾರ (ಸಂತೋಷ ಪಿ ಕೆ) ವಿಶ್ವಕರ್ಮ ಸಮಾಜದ ಉತ್ತರ ಕರ್ನಾಟಕ ಭಾಗದ ಅಧ್ಯಕ್ಷರಾದ ಉಮೇಶ ಪತ್ತಾರ, ಡಾ! ರಾಘವೇಂದ್ರ ಪತ್ತಾರ ಖ್ಯಾತ ವೈದ್ಯರು ಘಟಪ್ರಭಾ, ಹೀಗೆ ಅನೇಕ ಭಾಗವಹಿಸಿದ್ದರು.

## ಬಿಜೆಪಿಯವರದ್ದು 40 ಪರ್ಸೆಂಟ್ ಸರ್ಕಾರ, ಅದು ತೊಲಗಬೇಕು: ಮಾಜಿ ಸಚಿವ ಜೈರಾಮ್



ಬೆಳಗಾವಿ: ಶನಿವಾರ ನಗರದ ಕಾಂಗ್ರೆಸ್ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರು ಹಾಗೂ ಮಾಜಿ ಕೇಂದ್ರ ಸಚಿವರಾದ ರಮೇಶ ಜೈರಾಮ್ ಅವರು ಭಾಗಿಯಾಗಿ ಈ ಮೇಲಿನಂತೆ ತಿಳಿಸಿದ್ದಾರೆ.

2023ರ ಈ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಬಹುಮತ ಸಿಗುತ್ತದೆ, ಯಾಕಂದರೆ ರಾಹುಲ್ ಗಾಂಧಿ ಅವರ ಭಾರತ ಜೋಡೋ ಯಾತ್ರೆಯಿಂದ ಪಕ್ಷಕ್ಕೆ ಸಂಜೀವಿನಿ ದೊರೆತಿದೆ.

ಪ್ರತಿ ಜಿಲ್ಲೆ, ರಾಜ್ಯದಲ್ಲಿ ಜನತೆಗೆ ಬೇಟಿ ಮಾಡಿ, ಅವರ ಸಮಸ್ಯ ಆಲಿಸಿ, ಜನರನ್ನು ಪಕ್ಷದತ್ತ ಸೆಳೆದಿದ್ದೇವೆ, ಅದಕ್ಕಾಗಿ ಜನರು ಇಂದು ಕಾಂಗ್ರೆಸ್ ಪಕ್ಷದ ಹಿಂದೆ ಬರುತ್ತಿದ್ದಾರೆ.

ಕರ್ನಾಟಕ ರಾಜ್ಯದ ಸ್ವಂತ ಆದಾಯ ಇದ್ದಾಗ ಇದು ಹೇಗೆ ಡಬಲ್ ಇಂಜಿನ್ ಸರ್ಕಾರ ಆಗುತ್ತೆ ಎಂದು ಪ್ರಶ್ನೆ ಮಾಡಿದರು, ಬೋಗಸ್ ಡಬಲ್ ಇಂಜಿನ್ ಸರ್ಕಾರ, ಬಿಜೆಪಿಯ ಇದು ಟ್ರಬಲ್ ಇಂಜಿನ್ ಸರ್ಕಾರ, 40 ಪರ್ಸೆಂಟಿಸ್ ಸರ್ಕಾರ ಕರ್ನಾಟಕದಿಂದಲೆ ಪ್ರಾರಂಭವಾಗಿದೆ, ಅದರಿಂದ ಕರ್ನಾಟಕ ಮುಕ್ತ ಆಗಬೇಕು ಅದಕ್ಕಾಗಿ ಕಾಂಗ್ರೆಸ್ ಪಕ್ಷಕ್ಕೆ ಇಂದು ಜನಬೆಂಬಲ ಸಿಗ್ತಾ ಇದೆ ಎಂದರು

ಈ ಚುನಾವಣೆ ಪ್ರಧಾನ ಮಂತ್ರಿ ಸ್ಥಾನಕ್ಕೆ ಅಲ್ಲಾ, ಅದೇ ಬೇರೆ ಇದೇ ಬೇರೆ, ಲೋಕಸಭೆ ಬೇರೆ, ವಿಧಾನ ಸಭೆ ಚುನಾವಣೆ ಬೇರೆ, ಇದು ಹಿಂದೆ ಸಾಬೀತಾಗಿದೆ, ಪ್ರಧಾನಿ ಬಂದು ರೋಡ್ ಶೋ ಮಾಡಲಿ, ಆದರೆ ಅದ–ರಿಂದ ಪರಿಣಾಮ ಆಗೋಲ್ಲ, ಜನರು ರಾಜ್ಯ ನಾಯಕರನ್ನು, ತಮ್ಮ ಶಾಸಕ ಅಭ್ಯರ್ಥಿಯನ್ನು ನೋಡಿ ಮತ ನೀಡುವರು ಎಂದರು.

ಲೋಕಸಭಾ ಚುನಾವಣೆ ಅಂತೆ ಕೇಂದ್ರ ನಾಯಕರು ಬಂದು ಪ್ರಚಾರ ಮಾಡಿದರೆ, ಜನ ಮರುಳಾಗೊದಿಲ್ಲ, ಈ ಬಿಜೆಪಿ ಕಮಿಷನ್ ಸರ್ಕಾರ ಹೋಗುತ್ತೆ, ಕಾಂಗ್ರೆಸ್ ಪಕ್ಷಕ್ಕೆ ಬಹುಮತ ಬಂದು, ಕಾಂಗ್ರೆಸ್ ಸರ್ಕಾರ ರಚನೆ ಆಗುತ್ತೆ ಎಂದರು.

## ಚೆಕ್ ಪೋಸ್ಟ್ ಗಳಿಗೆ ಜಿಲ್ಲಾ ಚುನಾವಣಾ ವೆಚ್ಚ ನೋಡಲ್ ಅಧಿಕಾರಿ ಭೇಟಿ



ಬೆಳಗಾವಿ: ಜಿಲ್ಲಾ ವೆಚ್ಚ ವೀಕ್ಷಣಾ ನೋಡಲ್ ಅಧಿಕಾರಿ ಪರಶುರಾಮ ದುಡಗುಂಟಿ ಬೆಳಗಾವಿ ಉತ್ತರ ಕ್ಷೇತ್ರ ಹಾಗೂ ಗ್ರಾಮೀಣ ಕ್ಷೇತ್ರದ ಹಿರೇಬಾಗೇವಾಡಿ, ಅರಳಿಕಟ್ಟಿ, ಹತ್ತರಗಿ ಹಾಗೂ ಬಾಚಿ ಅಂತರರಾಜ್ಯ ಚೆಕ್ ಪೋಸ್ಟಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ಮತದಾನಕ್ಕೆ ಇನ್ನೇನು ನಾಲ್ಕು ದಿನ ಬಾಕಿ ಇರುವ ಹಿನ್ನೆಲೆಯಲ್ಲಿ ವಾಹನಗಳ ತಪಾಸಣೆ ತೀವ್ರಗೊಳಿಸುವಂತೆ ಚೆಕ್ ಪೋಸ್ಟ ಸಿಬ್ಬಂದಿಗಳಿಗೆ ನಿರ್ದೇಶಿಸಿದರು.

ತಪಾಸಣೆ ಪರಿಣಾಮಕಾರಿ ಆಗಲು ಹೆಚ್ಚುವರಿ ತಪಾಸಣಾ ಅಧಿಕಾರಿಗಳು ಮತ್ತು ಪೊಲೀಸರ ಸಂಖ್ಯೆಯನ್ನು ಹೆಚ್ಚಿಸಲು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಲಾಗುವುದು ಪಿ. ಬಿ. ದುಡಗುಂಟಿ ತಿಳಿಸಿದರು. ಮತದಾನ ದಿನ ಹತ್ತಿರವಾಗುತ್ತಿದ್ದಂತೆ ಅಕ್ರಮ ಹಣ ಹಾಗೂ ವಸ್ತುಗಳ ಸಾಗಾಣಿಕೆ ಹೆಚ್ಚಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಬಸ್ಸು, ಕಾರು, ಜೊತೆಗೆ ಬೈಕ್ ಗಳನ್ನೂ ಸಹ ತಪಾಸಣೆ ಮಾಡಬೇಕು ಎಂದು ಜಿಲ್ಲಾ ವೆಚ್ಚ ನೋಡಲ್ ಅಧಿಕಾರಿ ಚೆಕ್ ಪೋಸ್ಟ್ ಸಿಬ್ಬಂದಿಗೆ ತಿಳಿಸಿದರು. ಸಹಾಯಕ ವೆಚ್ಚ ವೀಕ್ಷಣಾಧಿ ಕಾರಿಗಳಾದ ಶೀತಲ ಕುರಣೆ ಮತ್ತು ಅಧಿಕಾರಿಗಳ, ಪೊಲೀಸ್, ಅರೆಸೇನಾ ಪಡೆಗಳ ಸಿಬ್ಬಂದಿ ಈ ಸಂದರ್ಭದಲ್ಲಿ ಉಪಸ್ಥಿತ–ರಿದ್ದರು.

## ಪ್ರಶಾಂತ ಸಂಬರಗಿ ವಿರುದ್ಧ ನಟ ಶಿವರಾಜ್ ಕುಮಾರ್ ಗರಂ



ಧಾರವಾಡ: ನಾನೂ ಹಣ ಪಡೆದುಕೊಂಡು ಪ್ರಚಾರಕ್ಕೆ ಬಂದಿಲ್ಲ, ನಾನೂ ಹಾರ್ಟ್‌ನಿಂದ, ಒಬ್ಬ ಮನುಷ್ಯನಾಗಿ ಪ್ರಚಾರಕ್ಕೆ ಬಂದಿದ್ದೇನೆ. ಇಲ್ಲಿ ವ್ಯಾಪಾರಕ್ಕೋಸ್ಕರ ಇಲ್ಲಿ ಬಂದಿಲ್ಲ. ಪ್ರೀತಿ ವಿಶ್ವಾಸಗೋಸ್ಕರ ಇಲ್ಲಿ ಬಂದಿದ್ದೇನೆ. ಬೇರೆ ಯಾರನ್ನೂ ಟೀಕೆ ಮಾಡಲಿಕ್ಕ ನಾ ನು ಬಂದಿಲ್ಲ ಎಂದು ನಟ ಶಿವರಾಜ್ ಕುಮಾರ್ ಪ್ರಶಾಂತ ಸಂಬರಗಿ ವಿರುದ್ಧ ಕೆಂಡಾಮಂಡಲರಾದರು.

ಧಾರವಾಡ ನಗರದಲ್ಲಿಂದು ಬಿಜೆಪಿ ಅಭ್ಯರ್ಥಿ ಜಗದೀಶ್ ಶೆಟ್ಟರ್ ಪರ ರೋಡ್ ಶೋ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಯಾತಕ್ಕೆ ಟ್ರೋಲ್ ಮಾಡಬೇಕು, ಟ್ರೋಲ್ ಮಾಡುವವರು ತಮ್ಮ ಮನಸ್ಸಿಗೆ ಯಾವೇ ಪ್ರಶ್ನೆ ಮಾಡಿಕೊಳ್ಳಿ ಇದು ಸರಿನಾ ಅಂತ . ಇವತ್ತು ರೋಡ್‌ಶೋನಲ್ಲಿ ಇಷ್ಟೊಂದು ಜನ ಬಂದಿದ್ದಾರೆ. ಇವರೆಲ್ಲ ಟ್ರೋಲ್ ಮಾಡಲಿಕ್ಕೆ ಬಂದಿದ್ದಾರೇನೂ. ಇಲ್ಲಿ ಬಂದವರೆಲ್ಲ ಕಾಂಗ್ರೆಸ್‌ನವರಲ್ಲ, ಬಿಜೆಪಿಯವರು ಇದ್ದಾರೆ, ಪಕ್ಷೇತರರು ಇದ್ದಾರೆ. ನಾನೂ ಪ್ರಚಾರಕ್ಕೆ ಬಂದಿರುವ ಬಗ್ಗೆ ಟ್ರೋಲ್ ಮಾಡುವವರ ಬಗ್ಗೆ ನಾ ಏನೂ ಮಾತನಾಡಲ್ಲ ಎಂದು ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಹೇಳಿದರು.

ಪ್ರತಿಯೊಬ್ಬ ವ್ಯಕ್ತಿಗೂ ತನ್ನದೆ ಆದ ವ್ಯಕ್ತಿತ್ವ ಇರುತ್ತದೆ, ಐಡಿಯಾಲಜಿ ಇರುತ್ತೆ. ಅವರದ್ದೆ ಕೆಲವು ಆಸೆಗಳು ಇರ್ತಾವೆ, ಅದಕ್ಕಾಗಿ ಬಂದಿರುತ್ತೇವೆ. ಅದನ್ನ ಬಿಟ್ಟು ನಾವು ಯಾರನ್ನ ದೋಷಿಸಲು ಇಲ್ಲಿ ಬಂದಿಲ್ಲ. ಟ್ರೋಲ್ ಮಾಡುವ ಅವಶ್ಯಕತೆ ಇಲ್ಲ. ಯಾತಕ್ಕೆ ಮಾಡಬೇಕು, ಮನುಷ್ಯ ಅರ್ಥ ಮಾಡಿಕೊಂಡರೆ ಸಾಕು. ಮನುಷ್ಯ ಯಶಸ್ವಿ ಆಗಬೇಕಾದ್ರೆ ಹಾರ್ಟ್ ಮತ್ತು ಮೆದುಳು ಮೊದಲು ಸರಿಯಾಗಿರಬೇಕು. ಮೊದಲು ನಿಮ್ಮ ಹೃದಯವನ್ನ ಕೇಳಿ ಆಮೇಲೆ ಟ್ರೋಲ್ ಮಾಡಿ. ಹುಬ್ಬಳ್ಳಿಗೂ ನಮಗೂ ಒಳ್ಳೆಯ ಸಂಬಂಧಿ ಇದೆ.

ಇಷ್ಟು ದಿನ ಸಿನಿಮಾ ಪ್ರಚಾರಕ್ಕಾಗಿ ಬರ್ತಾ ಇದ್ದೆ, ಇವತ್ತು ಈ ಪ್ರಚಾರಕ್ಕಾಗಿ ಬಂದಿದ್ದೇನೆ ಎಂದರು.

# ಬಿಜೆಪಿ ವಿರುದ್ಧ ಹರಿಹಾಯ್ದ ಮಾಜಿ ಡಿಸಿಎಂ ಲಕ್ಷ್ಮಣ ಸವದಿ



ಕಾಗವಾಡ: ಬಿಜೆಪಿ ಪಕ್ಷದಲ್ಲಿ ನಿಷ್ಠಾವಂತರಿಗೆ ಬೆಲೆಯಿಲ್ಲ. ಲಾಲ್ ಕೃಷ್ಣ ಅಡ್ವಾನಿ,ಅಟಲ್ ಬಿಹಾರಿ ವಾಜಪೇಯಿ, ಮುರಳಿ ಮನೋಹರ ಜೋಶಿ ಅವರಂಥ ಪ್ರಾಮಾಣಿಕ ನಾಯಕರ ಪಕ್ಷದಲ್ಲಿ ಇಂದು ಪಕ್ಷಕ್ಕೆ ದ್ರೋಹ ಮಾಡಿ ಬಂದವರಿಗೆ ಉನ್ನತ ಸ್ಥಾನ ಸಿಗುತ್ತಿವೆ ಎಂದು ಬಿಜೆಪಿ ವಿರುದ್ದ ಮಾಜಿ ಡಿಸಿಎಂ ಲಕ್ಷ್ಮಣ ಸವದಿ ಹರಿಹಾಯ್ದರು.

ಅವರು ಶನಿವಾರ ದಿ.7 ರಂದು ಕಾಂಗ್ರೆಸ್ ನ ಅಧಿಕೃತ ಅಭ್ಯರ್ಥಿ ರಾಜು ಕಾಗೆ ಅವರ ಪ್ರಚಾರ ಸಭೆಯನ್ನುದ್ದೇಶಿಸಿ ಮಾತನಾಡಿದರು. ಅವರು ಮುಂದೆ ಮಾತನಾಡುತ್ತಾ, ಪಕ್ಷಕ್ಕೆ ದ್ರೋಹ ಮಾಡಿ ಪ್ರಾಮಾಣಿಕನಾದ ಮಹಾಂತೇಶ ಕವಟಗಿಮಠ ಅವರನ್ನು ಪಕ್ಷದಲ್ಲಿದ್ದವರೇ ಸೋಲಿಸಿದರು ಅಂತವರಿಗೆ ಇವತ್ತು ದೊಡ್ಡ ದೊಡ್ಡ ಕುರ್ಚಿಗಳು ಸಿಗತ್ತಿವೆ ಎಂದರು.

ಬಿಜೆಪಿ ಪಕ್ಷದಲ್ಲಿ ಪ್ರಾಮಾಣಿಕರನ್ನ ಸೋಲಿಸುವದು ದ್ರೋಹ ಮಾಡುವವರನ್ನ ಗೆಲ್ಲಿಸುವದು ಇವತ್ತಿನ ಬಿಜೆಪಿ ಪಕ್ಷದ ಸಿದ್ಧಾಂತವಾಗಿದೆ ಎಂದರು. ಇವತ್ತು ಅಥಣಿಯಲ್ಲಿ ಅಮಿತ್ ಶಾ ನನ್ನ ವಿರುದ್ದ ಮಾತನಾಡಿ ಹೋಗಿದ್ದಾರೆ.

ಅವರು ಮಾತನಾಡಿದ್ದನ್ನ ನನಗೆ ಆಶೀರ್ವಾದ ಎಂದು ತಿಳಿದುಕೊಳ್ಳುವೆ. ಅದೇ ರೀತಿ ಯಡಿಯೂರಪ್ಪನವರು ಅಥಣಿಯಲ್ಲಿ ಲಕ್ಷ್ಮಣ ಸವದಿ, ಹುಬ್ಬಳ್ಳಿಯಲ್ಲಿ ಜಗದೀಶ ಶೆಟ್ಟರ್ ನ್ನು ಸೋಲಿಸುವದು ಶತಸಿದ್ದ ಅದನ್ನ ನಾನು ರಕ್ತದಲ್ಲಿ ಬರೆದು ಕೊಡುವದಾಗಿ ಹೇಳಿಕೆ ನೀಡಿದ್ದರು. ಆದರೆ ಅಥಣಿ ಮತಕ್ಷೇತ್ರದ ಜನ ಲಕ್ಷ್ಮಣ ಸವದಿಯವರು ಆಯ್ಕೆ ಮಾಡಿಕೊಡವದಾಗಿ ರಕ್ತದಾನ ಶಿಬಿರ ಪ್ರಾರಂಭ ಮಾಡಿದ್ದಾರೆ ಎಂದು ಯಡಿಯೂರಪ್ಪನವಿಗೆ ಟಾಂಗ್ ನೀಡಿದರು.

ಅನಂತಪೂರ ಮತ್ತು ಮದಭಾವಿ ಜಿಲ್ಲಾ ಪಂಚಾಯತ ವ್ಯಾಪ್ತಿಯಲ್ಲಿ ಕನಿಷ್ಟ ಪಕ್ಷ ಹತ್ತು ಸಾವಿರ ಮತಗಳನ್ನು ಬಿಜೆಪಿಯವರಿಗಿಂತ ಹೆಚ್ಚು ಮತಗಳನ್ನ ಮಾಡಿ ಕೊಡುತ್ತೇನೆ. ಕಾಗವಾಡ ಹಾಗೂ ಮಂಗಸೂಳಿ ಜಿಲ್ಲಾ ಪಂಚಾಯತ ವ್ಯಾಪ್ತಿಯಲ್ಲಿ ಐದು ಸಾವಿರ ಮತಗಳನ್ನು ಹೆಚ್ಚಿಗೆ ಮಾಡುವದು ಈ ಭಾಗದ ನಾಯಕರ ಜವಾಬ್ದಾರಿಯಾಗಿದೆ.

ಇದರಿಂದ ರಾಜು ಕಾಗೆಯವರು ಹೆಚ್ಚಿನ ಮತಗಳಿಂದ ಆಯ್ಕೆ ಮಾಡಬೇಕು ಎಂದು ಹೇಳಿದರು.

ನಂತರ ಕಾಂಗ್ರೆಸ್ ಅಭ್ಯರ್ಥಿ ರಾಜು ಕಾಗೆ ಮಾತನಾಡಿ,ಕ್ಷೇತ್ರದ ಜನರ ಆಶೀರ್ವಾದದಿಂದ ನಾನು ಕಳೆದ ನಾಲ್ಕು ಬಾರಿ ಶಾಸಕನಾಗಿ ಸ್ವಚ್ಛ ಆಡಳಿತ ಮಾಡಿದ್ದೇನೆ. ಈ ವರ್ಷ ಮತ್ತೇ ನಿಮ್ಮ ಸೇವೆಗಾಗಿ ಆಶೀರ್ವಾದ ಬೇಡಲು ಬಂದಿದ್ದೇವೆ.

ಬರುವ ಮೇ 10 ರಂದು ಪ್ರಬುದ್ಧ ಮತದಾರರು ಹಣ ಹೆಂಡದ ಆಸೆಗಾಗಿ ತಮ್ಮ ಮತವನ್ನು ಮಾರಿಕೊಳ್ಳದೇ ಬಡವರ ದೀನ ದಲಿತರ ಏಳ್ಗೆಗಾಗಿ ಶ್ರಮಿಸುವ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿ ಹೆಚ್ಚಿನ ಮತಗಳಿಂದ ನನ್ನನ್ನು ಆಯ್ಕೆ ಮಾಡಿಕೊಟ್ಟರೇ ಸರ್ವ ಜನಾಂಗವನ್ನು ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸಿ ಎಂದು ಮತದಾರರಲ್ಲಿ ಮನವಿ ಮಾಡಿದರು.

ಇದೆ ಸಂದರ್ಭದಲ್ಲಿ ಲಕ್ಷ್ಮಣ ಸವದಿ ಸಮ್ಮುಖದಲ್ಲಿ ಎಲ್ ಎಸ್ ಗ್ರುಪ್ ಸದಸ್ಯರು ಅಧಿಕೃತವಾಗಿ ಕಾಂಗ್ರೆಸ್ ಸೇರ್ಪಡೆಗೊಂಡರು. ಹಾಗೂ ಜೆಡಿ–ಎಸ್ ಮತ್ತು ಬಿಜೆಪಿ ಪಕ್ಷ ತೊರೆದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಅಭ್ಯರ್ಥಿ ರಾಜು ಕಾಗೆ,ಚಂದ್ರಕಾಂತ ಇಮ್ಮಡಿ,ಓಂಪ್ರಕಾಶ ಪಾಟೀಲ್, ವಿಜಯ ಅಕಿವಾಟೆ,ರವಿ ಪೂಜಾ–ರಿ,ಜ್ಯೋತಿಕುಮಾರ ಪಾಟೀಲ್ ,ರಮೇಶ ಚೌಗಲಾ, ಸಂಜಯ ತಳವಲ್ಕರ್, ಅಜೀತ ಚೌಗಲಾ, ಕಾಕಾ ಪಾಟೀಲ್,ಚಿದಾನಂದ ಅವಟಿ, ನಾಥಗೌಡಾ ಪಾಟೀಲ್, ಪ್ರಕಾಶ ಪಾಟೀಲ್, ರೇಖಾ ಪುಂಜಪ್ಪಗೊಳ, ವಸಂತ ಖೋತ, ಶಂಕರ ಕಾಂಬ್ಳೆ, ವಿಶಾಲ ದೊಂಡಾರೆ,ಸುನೀಲ ಕಾಂಬ್ಳೆ, ಜನಾರ್ಧನ ದೊಂಡಾರೆ, ಮಹಾವೀರ ದೊಂಡಾರೆ, ವಿನಾಯಕ ಕಾಂಬ್ಳೆ, ವೆಂಕಟೇಶ್ ಕಾಂಬ್ಳೆ,ಸೇರಿದಂತೆ ಸಾವಿರಾರು ಕಾರ್ಯಕರ್ತರು ಇದ್ದರು.

ಈ ವೇಳೆ ಜ್ಯೋತಿಕುಮಾರ ಪಾಟೀಲ್ ಸ್ವಾಗತಿಸಿದರು. ರಾಜುಗೌಡಾ ಪಾಟೀಲ್ ನಿರೂಪಿಸಿ ವಂದಿಸಿಸಿದರು.

## ವಿಧಾನಸಭೆ ಚುನಾವಣೆ: ಮತ ಎಣಿಕೆ ಸಿಬ್ಬಂದಿಗೆ ತರಬೇತಿ

# ಮತ ಎಣಿಕೆ ಪ್ರಕ್ರಿಯೆ ಸುಗಮಗೊಳಿಸಲು ತರಬೇತಿ: ಜಿಲ್ಲಾಧಿಕಾರಿ

ಬೆಳಗಾವಿ: ವಿಧಾನಸಭೆ ಚುನಾವಣೆ ಬಳಿಕ ಮೇ 13 ರಂದು ನಡೆಯಲಿರುವ ಮತ ಎಣಿಕೆ ಪ್ರಕ್ರಿಯೆಯು ಅತ್ಯಂತ ಮಹತ್ವದ್ದಾಗಿರುತ್ತದೆ. ಮತ ಎಣಿಕೆಗೆ ಸಂಬಂಧಿಸಿದಂತೆ ಚುನಾವಣಾ ಆಯೋಗದ ಮಾರ್ಗಸೂಚಿಗಳನ್ನು ಸ್ಪಷ್ಟವಾಗಿ ತಿಳಿದುಕೊಂಡು ನಿಯಮಾವಳಿ ಪ್ರಕಾರ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಅವರು ಸೂಚನೆ ನೀಡಿದರು.



ಮತ ಎಣಿಕೆ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ನಗರದ ಕುಮಾರ್ ಗಂಧರ್ವ ರಂಗಮಂದಿರದಲ್ಲಿ ಶನಿವಾರ(ಮೇ 6) ಏರ್ಪಡಿಸಲಾಗಿದ್ದ ತರಬೇತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮತ ಎಣಿಕೆ ಪ್ರಕ್ರಿಯೆ ಹಾಗೂ ನಿಯಮಗಳ ಕುರಿತು ಯಾವುದೇ ರೀತಿಯ ಗೊಂದಲಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬಾರದು. ತರಬೇತಿ ಸಂದರ್ಭದಲ್ಲಿಯೇ ಅವುಗಳನ್ನು ಪರಿಹ–ರಿಸಿಕೊಳ್ಳಬೇಕು.

ಮತ ಎಣಿಕೆ ದಿನ ಯಾವುದೇ ಗೊಂದಲಗಳಿಗೆ ಆಸ್ಪದ ನೀಡದಂತೆ ಅಚ್ಚುಕಟ್ಟಾಗಿ ಕೆಲಸ ಮಾಡಬೇಕು. ಒಂದು ವೇಳೆ ಏನಾದರೂ ಸಮಸ್ಯೆ ಎದುರಾದರೆ ಸ್ಥಳದಲ್ಲಿಯೇ ಇರುವ ಚುನಾವಣಾಧಿಕಾ–ರಿಗಳ ಗಮನಕ್ಕೆ ತರಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದರು.

**ಸಂಪೂರ್ಣ ತಿಳಿವಳಿಕೆ ಅಗತ್ಯ:**

ಮತ ಎಣಿಕೆ ಕಾರ್ಯವು ಅತ್ಯಂತ ಸೂಕ್ಷ್ಮ ಕೆಲಸವಾಗಿದೆ. ಆದರೆ ಸಂದರ್ಭದಲ್ಲಿ ಎದುರಾಗಬಹುದಾದ ಪ್ರತಿಯೊಂದು ಸಣ್ಣ ಸಣ್ಣ ಸಮಸ್ಯೆಯನ್ನು ಯಾವ ರೀತಿ ನಿರ್ವಹಿಸಬೇಕು ಎಂಬುದಕ್ಕೆ ವಿಸ್ತೃತವಾದ ಮಾರ್ಗಸೂಚಿಗಳಿದ್ದು, ಅವುಗಳನ್ನು ಮುಂಚಿತವಾಗಿಯೇ ತಿಳಿದುಕೊಳ್ಳುವ ಅಗತ್ಯವಿದೆ ಎಂದು ರಾಜ್ಯಮಟ್ಟದ ಚುನಾವಣಾ ತರಬೇತುದಾರರಾದ ಪ್ರೊ.ಶಿರಗಾಂವಕರ ಅವರು ತಿಳಿಸಿದರು.

ರಾಜ್ಯ ಚುನಾವಣಾ ಆಯೋಗದ ಮತ ಎಣಿಕೆಯ ಎಲ್ಲಾ ಮಾರ್ಗ ಸೂಚನೆಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು.

ಮತ ಎಣಿಕೆ ಸಂದರ್ಭದಲ್ಲಿ ಯಾವುದೇ ಸಮಸ್ಯೆ ಕಂಡುಬಂದಲ್ಲಿ ತಕ್ಷಣ ಅಲ್ಲಿರುವ ಆರ್ ಓ ಅಧಿಕಾರಿಗಳ ಗಮನಕ್ಕೆ ತರಬೇಕು.

ಕೊನೆಯ ಸುತ್ತಿನ ಮತ ಎಣಿಕೆ ಆಗುವವರೆಗೂ ಯಾವುದೇ ಕಾರಣ–ಕ್ಕೂ ಫಲಿತಾಂಶದ ಬಗ್ಗೆ ಮಾಹಿತಿ ನೀಡಬಾರದು.

ಇವಿಎಂ ಮತ ಯಂತ್ರಗಳ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ತಿಳಿದುಕೊಳ್ಳಬೇಕು.

ಇದಲ್ಲದೇ ಅಂಚೆ ಮತಗಳನ್ನು ಸರಿಯಾಗಿ ಗುರುತಿಸಿ ಮತ ಎಣಿಕೆ ಮಾಡಬೇಕು ಎಂದು ರಾಜ್ಯ ಚುನವಣಾ ತರಬೇತಿದಾರರಾದ ಶಿರಗಾಂವಕರ ಅವರು ಹೇಳಿದರು.

ಇವಿಎಂ ಮತ್ತಿತರ ಸಾಧನಗಳನ್ನು ಬಳಸಿಕೊಂಡು ಮತ ಎಣಿಕೆಯ ಕುರಿತು ಪ್ರಾತ್ಯಕ್ಷಿಕೆಯನ್ನು ಅವರು ನೀಡಿದರು.

ಇದೇ ಸಂದರ್ಭದಲ್ಲಿ ಚುನಾವಣಾಧಿಕಾರಿಗಳು ಮತ್ತು ಮತ ಎಣಿಕೆ ಅಧಿಕಾರಿ/ಸಿಬ್ಬಂದಿಯ ಅನುಮಾನಗಳನ್ನು ಪರಿಹರಿಸುವುದರ ಜತೆಗೆ ವಿವಿಧ ರೀತಿಯ ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ಗೊಂದಲವನ್ನು ನಿವಾರಿಸಲಾಯಿತು.

ಮತ ಎಣಿಕೆ ತರಬೇತಿ ಸಭೆಯಲ್ಲಿ ಸಾಮಾನ್ಯ ವೀಕ್ಷಕರು, ಜಿಲ್ಲಾಧಿಕಾ–ರಿಗಳಾದ ನಿತೇಶ್ ಕೆ. ಪಾಟೀಲ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಹರ್ಷಲ್ ಭೋಯರ್, ವಿವಿಧ ಮತಕ್ಷೇತ್ರಗಳ ಚುನಾವಣಾಧಿಕಾ–ರಿಗಳು, ನೋಡಲ್ ಅಧಿಕಾರಿಗಳು ಉಪಸ್ಥಿತರಿದ್ದರು.

ಮತ ಎಣಿಕೆಗೆ ನಿಯೋಜಿತ ಅಧಿಕಾ–ರಿಗಳು ಹಾಗೂ ಸಿಬ್ಬಂದಿಗೆ ತರಬೇತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಮತಜಾಗೃತಿ: ಕಾಲ್ನನಡಿಗೆ ಜಾಥಾ



ಬೆಳಗಾವಿ: ಜಿಲ್ಲಾ ಪಂಚಾಯತ ಹಾಗೂ ಸಾಗರ ಕಾಲೇಜಿನ ವತಿಯಿಂದ ನಗರದ ಬೋಗಾರವೇಸ ವೃತ್ತತದಲ್ಲಿ ಶನಿವಾರ ಮೇ.6 ರಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಹರ್ಷಲ್ ಭೂಯರ್ ಅವರು ಹಸಿರು ನಿಶಾನೆ ತೋರಿಸುವ ಮೂಲಕ ಜಾಥಾಗೆ ಚಾಲನೆ ನೀಡಿದರು.

ನನ್ನ ಮತ ಮಾರಾಟಕಿಲ್ಲ, ಮತದಾನದಿಂದ ವಂಚಿತರಾಗಬೇಡಿ, ನಮ್ಮ ಮತ ನಮ್ಮ ಹಕ್ಕು, ಆಮಿಷಕ್ಕೆ ಮರುಳಾಗದಿರಿ ಯೋಚಿಸಿ ಮತ ಚಲಾಯಿಸಿ, ಆಮಿಷಗಳನ್ನು ನಿರಾಕರಿಸಿ ನಿಮ್ಮಿಷ್ಟದಂತೆ ಚಲಾಯಿಸಿ, ಪ್ರತಿ ಮತವು ಅಮೂಲ್ಯ ತಪ್ಪದೇ ಮತ ಚಲಾಯಿಸಿ ಎಂದು ವಿವಿಧ ಮತಜಾಗೃತಿ ಘೋಷಣೆಗಳನ್ನು ಕೂಗುವುದರ ಮುಖಾಂತರ ಸಾರ್ವಜನಿಕರಲ್ಲಿ ಮತಜಾಗೃತಿ ಮೂಡಿಸಲಾಯಿತು.

ಮತದಾನ ಕಾಲ್ನಡಿಗೆ ಜಾಥಾ ಕಾರ್ಯಕ್ರಮವು ನಗರದ ಬೋಗಾರವೇಸ, ಮಾರುತಿ ಗಲ್ಲಿ, ಗಣಪತಿ ಗಲ್ಲಿ ಹಾಗೂ ಶನಿವಾರ ಕೂಟ ಮೂಖಾಂತರ ರಾಣಿ ಚೆನ್ನಮ್ಮ ವೃತ್ತಕ್ಕೆ ಬಂದು ಮುಕ್ತಾಯವಾಯಿತು.

ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕರಾದ ರವಿ ಬಂಗಾರೆಪ್ಪನವರ, ಸಾಗರ ಬಿ. ಎಡ್. ಕಾಲೇಜಿನ ಪ್ರಾಚಾರ್ಯರಾದ ಆರ್. ಫ್ಹಿ. ಹಳಬ, ಡಾ. ಟಿ. ಎಂ. ನೌಕುಡಕರ, ವಿನಾಯಕ ಮೊರೆ, ಎನ್. ಐ. ಸನದಿ, ಡಿ. ಎಂ. ಚವ್ಹಾನ, ಎಂ. ಬಿ. ನರಸನ್ನವರ, ಎಂ. ಎಸ್. ಹಿರೇಮಠ, ಜಿಲ್ಲಾ ಎಸ್.ಬಿ.ಎಂ ಸಮಾಲೋಚಕ ಬಾಹುಬಲಿ ಮೆಳವಂಕಿ, ತಾಲ್ಲೂಕು ಐಇಸಿ ಸಂಯೋಜಕ ರಮೇಶ ಮಾದರ ಹಾಗೂ ಎಲ್ಲ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ಧರು.

## ಲಕ್ಷ್ಮೀ ಹೆಬ್ಬಾಳಕರ್ ಅವರಂತಹ ಶಾಸಕರು ಸಿಗುವುದು ಅಪರೂಪ: ಶಾಸಕಿ ಪ್ರಣತಿ ಶಿಂಧೆ

ಬೆಳಗಾವಿ: ಆಯ್ಕೆಯಾದ ನಂತರ 5 ವರ್ಷ ಜನರತ್ತ ಮುಖವನ್ನೇ ಹಾಕದ ಜನಪ್ರತಿನಿಧಿಗಳೇ ಹೆಚ್ಚಾಗಿರುವ ಇಂದಿನ ದಿನಗಳಲ್ಲಿ ಲಕ್ಷ್ಮೀ ಹೆಬ್ಬಾಳಕರ್ ಅವರಂತಹ ನಿರಂತರವಾಗಿ ಜನರ ಜೊತೆ ಇರುವ ಶಾಸಕರು ಸಿಗುವುದು ಅಪರೂಪ ಎಂದು ಸೊಲ್ಲಾಪುರ ಶಾಸಕಿ ಪ್ರಣತಿ ಶಿಂಧೆ ಹೇಳಿದ್ದಾರೆ.



ಅವರು ಬೆಳಗಾವಿ ಗ್ರಾಮೀಣ ಕ್ಷೇತ್ರದ ದೇಸೂರಿನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮೀ ಹೆಬ್ಬಾಳಕರ್ ಅವರ ಪರ ಚುನಾವಣೆ ಪ್ರಚಾರ ನಡೆಸುತ್ತಿದ್ದರು. ಲಕ್ಷ್ಮೀ ಹೆಬ್ಬಾಳಕರ್ ಅವರು ಮಾಡಿರುವ ಅಭಿವೃದ್ಧಿ ಕೆಲಸಗಳನ್ನು ನೋಡಿದರೆ ಎಲ್ಲ ಜನಪ್ರತಿನಿಧಿಗಳಿಗೆ ಅವರು ಆದರ್ಶರಾಗುತ್ತಾರೆ. ಜೊತೆಗೆ ಅವರು ನಿರಂತರವಾಗಿ ಜನರೊಂದಿಗೆ ಸಂಪರ್ಕದಲ್ಲಿರುವುದು ಕೂಡ ವಿಶೇಷವಾಗಿದೆ. ಅಂತಹ ಶಾಸಕರನ್ನು ಗ್ರಾಮೀಣ ಕ್ಷೇತ್ರದ ಜನರು ಯಾವುದೇ ಕಾರಣದಿಂದ ಕಳೆದುಕೊಳ್ಳಲು ಇಚ್ಚಿಸುವುದಿಲ್ಲ ಎನ್ನುವ ವಿಶ್ವಾಸವಿದೆ ಎಂದು ಅವರು ಹೇಳಿದರು.

ಕಾಂಗ್ರೆಸ್ ಪಕ್ಷ ಬಡವರ ಪರವಾಗಿರುವ ಪಕ್ಷ. ಹಾಗಾಗಿ ಈ ಬಾರಿಯ ಚುನಾವಣೆಯಲ್ಲಿ ಬಡವರ ಪರವಾಗಿ ಹಲವಾರು ಗ್ಯಾರಂಟಿಗಳನ್ನು ಘೋಷಿಸಿದೆ. 200 ಯುನಿಟ್ ಉಚಿತ ವಿದ್ಯುತ್, ಮನೆಯ ಯಜಮಾನಿಗೆ ಪ್ರತಿ ತಿಂಗಳ 2 ಸಾವಿರ ರೂ., ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಭತ್ಯೆ, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಮೊದಲಾದವುಗಳನ್ನು ಘೋಷಿಸಿದೆ.

ರಾಜ್ಯದಲ್ಲಿ ಈ ಬಾರಿ ಬದಲಾವಣೆಯಾಗಲಿದ್ದು, ನಿಜವಾದ ಪ್ರಗತಿಯನ್ನು ಕಾಣಲಿದ್ದೀರಿ. ಹಾಗಾಗಿ ಲಕ್ಷ್ಮೀ ಹೆಬ್ಬಾಳಕರ್ ಅವರಿಗೆ ಮತ ನೀಡುವ ಮೂಲಕ ಕಾಂಗ್ರೆಸ್ ಸರಕಾರವನ್ನು ಅಧಿಕಾರಕ್ಕೆ ತನ್ನಿ ಎಂದು ಪ್ರಣತಿ ಶಿಂಧೆ ಮನವಿ ಮಾಡಿದರು.

ಯುವ ಕಾಂಗ್ರೆಸ್ ಮುಖಂಡ ಮೃಣಾಲ ಹೆಬ್ಬಾಳಕರ್ ಮಾತನಾಡಿ, ಲಕ್ಷ್ಮೀ ಹೆಬ್ಬಾಳಕರ್ ಅವರು ಕಳೆದ 5 ವರ್ಷ ಮಾಡಿರುವ ಕೆಲಸವನ್ನು ನೀವೆಲ್ಲ ಹತ್ತಿರದಿಂದ ನೋಡಿದ್ದೀರಿ. ನಿಮ್ಮ ಮನೆ ಮಗಳಂತೆ ಜವಾಬ್ದಾರಿ ನಿರ್ವಹಿಸಿದ್ದಾರೆ. ನಿಮ್ಮ ಕಷ್ಟ ಕಾಲದಲ್ಲಿ ನಿಮ್ಮೊಂದಿಗೆ ನಿಂತಿದ್ದಾರೆ. ಕ್ಷೇತ್ರದಲ್ಲಿ ಹಿಂದೆಂದೂ ಕಾಣದಂತಹ ರೀತಿಯಲ್ಲಿ ಅಭಿವೃದ್ಧಿ ಮಾಡಿದ್ದಾರೆ. ಮೇ 10ರಂದು ನಡೆಯಲಿರುವ ಚುನಾವಣೆಯಲ್ಲಿ ಬ್ಯಾಲೆಟ್ ಯುನಿಟ್ ನಲ್ಲಿ 4ನೇ ನಂಬರ್ ನಲ್ಲಿರುವ ಹಸ್ತದ ಗುರುತಿಗೆ ಮತ ನೀಡುವ ಮೂಲಕ ಲಕ್ಷ್ಮೀ ಹೆಬ್ಬಾಳಕರ್ ಅವರನ್ನು ಬೆಂಬಲಿಸಿ ಎಂದು ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ, ಮಹಿಳೆಯರು ಸೇರಿದಂತೆ ಭಾರೀ ಸಂಖ್ಯೆಯಲ್ಲಿ ಜನರು ಮೆರವಣಿಗೆ ನಡೆಸಿ ಲಕ್ಷ್ಮೀ ಹೆಬ್ಬಾಳಕರ್ ಪರವಾಗಿ ಮತ ಯಾಚಿಸಿದರು. ಸ್ಥಳೀಯ ಹಲವಾರು ಮುಖಂಡರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಬೆಳಗಾವಿ ಉತ್ತರದಲ್ಲಿ ಭರ್ಜರಿ ಪ್ರಚಾರ ನಡೆಸಿದ ಪ್ರವೀಣ ಹಿರೇಮಠ

ಬೆಳಗಾವಿ : ಬೆಳಗಾವಿ ಮತ ಕ್ಷೇತ್ರದ ಶ್ರೀನಗರ ಹಾಗೂ ವಂಟಮುರಿ ಕಾಲೋನಿಯಲ್ಲಿ ಭರ್ಜರಿ ಮತ ಭೇಟಿ ನಡೆಸಿದ ಪ್ರವೀಣ ಹಿರೇಮಠ ಕಲ್ಯಾಣ ರಾಜ್ಯ ಪ್ರಗತಿ ಪಕ್ಷಕ್ಕೆ ಮತ ನೀಡುವಂತೆ ನಿವಾಸಿಗಳಲ್ಲಿ ಕೇಳಿಕೊಂಡಿದ್ದಾರೆ.



ಮೀಡಿಯಾ ಮಿತ್ರರೊಂದಿಗೆ ಮಾತನಾಡಿದ ಪ್ರವೀಣ ಕಲ್ಯಾಣ ರಾಜ್ಯ ಪ್ರಗತಿ ಪಕ್ಷ ಹಾಗು ಗಾಲಿ ಜನಾರ್ಧನ ರೆಡ್ಡಿ ಭಾರತ ಬಿಟ್ಟು ಹೊರ ದೇಶಕ್ಕೆ ಹೋಗಿ NASA ಅಂತಹ org ಗಳಲ್ಲಿ ಕೆಲಸ ಮಾಡುತ್ತಿರುವ ನಮ್ಮ ಭಾರತೀಯ ಟ್ಯಾಲೆಂಟಗಳು ಭಾರತದಲ್ಲಿಯೇ ಕೆಲಸ ಮಾಡುವಂತೆ ಮಾಡಿದರೆ ಭಾರತ ದೇಶದ ಕೀರ್ತಿ ಮತ್ತಷ್ಟು ಉತ್ತುಂಗಕ್ಕೇರುತ್ತದೆ ಮತ್ತು ಭಾರತ ಒಂದು ಮಾದರಿ ದೇಶವಾಗುತ್ತದೆ ಎಂದು ಹೇಳಿದ್ದಾರೆ.

ಸ್ವತಹ ನರೇ ಆಗಿರುವ ಪ್ರವೀಣ 86ರಕಿಂತ ಅನೇಕ ದೇಶಗಳನ್ನು ಸುತ್ತಿ ಅಲ್ಲಿನ ವ್ಯವಸ್ಥೆ ಬಗ್ಗೆ ಅರಿತಿರುವುದಾಗಿ ತಿಳಿಸಿದ್ದರೆ, ಇನ್ನು ಬೆಳಗಾವಿ ಪರಿಸರದ ಬಗ್ಗೆ ಅಪಾರ ಕಾಳಜಿ ಹೊಂದಿರುವ ಪ್ರವೀಣ ಬೆಳಗಾವಿ ಪರಿಸರದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತೇನೆ ಎಂದು ಹೇಳಿದ್ದಾರೆ.

ಬೆಳಗಾವಿಯನ್ನು ಐಟಿ–ಬಿಟಿ ಹಬ ಆಗಿ ಮಾಡಿತ್ತಿರುತ್ತೇನೆ ಎಂದು ಹೇಳಿದ ಪ್ರವೀಣ್ ಹಿರೇಮಠ ಬೆಳಗಾವಿಯಲ್ಲಿ ಐಟಿಬಿಟಿ ಪಾರ್ಕ್ ಹಾಗು ಪ್ರತಿ ಏರಿಯಾಗಳಲ್ಲಿ ಮೆಡಿಕಲ್ ಸ್ಟೇಷನ್ ಮಾಡುವುದಾಗಿ ತಿಳಿಸಿದ್ದಾರೆ.

ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಪ್ರಣಾಳಿಕೆ ಮತ್ತು ಮುಂದಿನ ಉದ್ದೇಶಗಳ ಬಗ್ಗೆ ಮಾಧ್ಯಮ ದವರೊಂದಿಗೆ ಹಂಚಿಕೊಂಡ ಪ್ರವೀಣ್ ಕಲ್ಯಾಣ್ ರಾಜ್ಯ ಪ್ರಗತಿ ಪಕ್ಷದ ಪ್ರಣಾಳಿಕೆ ಜನ ಸ್ನೇಹಿ ಪ್ರಣಾಳಿಕೆ ಹಾಗು ಕರುನಾಡಿನ ಜನತೆಯ ಮೆಚ್ಚುಗೆ ಪಡೆದಿದೆ ಎಂದು ಹೇಳಿದ್ದಾರೆ.

## ಈ ಬಾರಿ ಕಳೆದ ಬಾರಿಗಿಂತ ಭರ್ಜರಿ ಅಂತರದ ಗೆಲುವು ನಿಶ್ಚಿತ: ಲಕ್ಷ್ಮೀ ಹೆಬ್ಬಾಳಕರ್ ವಿಶ್ವಾಸ



ಬೆಳಗಾವಿ: ಈ ಬಾರಿ ಚುನಾವಣೆಯಲ್ಲಿ ಕಳೆದ ಬಾರಿಗಿಂತ ಹೆಚ್ಚಿನ ಅಂತರದಿಂದ ಗೆಲ್ಲುವುದು ನಿಶ್ಚಿತ ಎಂದು ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮೀ ಹೆಬ್ಬಾಳಕರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಬಸ್ತವಾಡದಲ್ಲಿ ಚುನಾವಣೆ ಪ್ರಚಾರ ಭಾಷಣ ಮಾಡುತ್ತಿದ್ದ ಅವರು, ಕ್ಷೇತ್ರದಲ್ಲಿ ಸಂಪೂರ್ಣ ನನ್ನ ಮತ್ತು ಕಾಂಗ್ರೆಸ್ ಪರವಾದ ಅಲೆ ಉಂಟಾಗಿದೆ. ಕಳೆದ ಬಾರಿ ನನ್ನ ಜೊತೆಗಿದ್ದ ಮುಖಂಡರು, ಕಾರ್ಯಕರ್ತರ ಜೊತೆಗೆ ಈ ಬಾರಿ ಮತ್ತಷ್ಟು ಸಂಖ್ಯೆಯಲ್ಲಿ ಸೇರಿ ನನಗೆ ಆಶೀರ್ವಾದ ಮಾಡುತ್ತಿದ್ದಾರೆ. ಎಲ್ಲಿಗೆ ಹೋದರೂ ಜನ ಸಾಗರವೇ ಸೇರಿ ನನ್ನ ಮೇಲೆ ಪ್ರೀತಿ ತೋರುತ್ತಿದ್ದಾರೆ. ನಿಮ್ಮ ಬೆಂಬಲ ನೋಡಿ ನನ್ನ ಮನಸ್ಸು, ಹೃದಯ ತುಂಬಿ ಬರುತ್ತಿದೆ. ಏನು ಮಾತನಾಡಬೇಕೆಂದೇ ತೋರುತ್ತಿಲ್ಲ. ಖಂಡಿತ ಮುಂದಿನ ದಿನಗಳಲ್ಲಿ ನಿಮ್ಮ ಋಣವನ್ನು ತೀರಿಸುವ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದರು.

2018ರ ಚುನಾವಣೆಯಲ್ಲಿ ನನ್ನ ಜೊತೆಗಿದ್ದ ಯಾರೊಬ್ಬರೂ ನನ್ನ ಕೈ ಬಿಟ್ಟಿಲ್ಲ. ಬದಲಾಗಿ ಇನ್ನಷ್ಟು ಮುಖಂಡರು, ಕಾರ್ಯಕರ್ತರು ನನ್ನ ಬೆಂಬಲಕ್ಕೆ ಬಂದಿದ್ದಾರೆ. ನನ್ನ ಅಭಿವೃದ್ಧಿ ಕೆಲಸಕ್ಕೆ ಮೆಚ್ಚಿದ್ದಾರೆ. ಅನ್ಯ ಪಕ್ಷಗಳಲ್ಲಿ ಗುರುತಿಸಿಕೊಂಡಿರುವ ಅನೇಕರು ವಿವಿಧ ಕಾರಣದಿಂದ ಮುಂದೆ ಬಂದು ಬೆಂಬಲಿಸಲು ಸಾಧ್ಯವಾಗುತ್ತಿಲ್ಲ. ಆದರೆ ನಾವು ನಿಮ್ಮ ಜೊತೆಗಿದ್ದೇವೆ. ಖಂಡಿತ ನೀವು ಈ ಬಾರಿ ಭಾರೀ ಅಂತರದಿಂದ ಜಯಗಳಿಸುತ್ತೀರಿ ಎಂದು ಫೋನ್ ಮಾಡಿ ಹಾರೈಸುತ್ತಿದ್ದಾರೆ. ಇದಕ್ಕಿಂತ ಅಭಿಮಾನದ ಸಂಗತಿ ಇನ್ನೇನು ಬೇಕು. ಎಲ್ಲರೂ ಜೊತೆಯಾಗಿ ಕ್ಷೇತ್ರವನ್ನು ಅಭಿವೃದ್ಧಿ ಪಥ–'ದಲ್ಲಿ ಮುನ್ನಡೆಸೋಣ. ಮೇ 10ರಂದು ನನ್ನ ಗುರುತಾಗಿರುವ ಹಸ್ತದ ಚಿಹ್ನೆಯ ಮುಂದಿರುವ ಬಟನ್ ಒತ್ತುವ ಮೂಲಕ ಆಶೀರ್ವದಿಸಿ ಎಂದು ಲಕ್ಷ್ಮೀ ಹೆಬ್ಬಾಳಕರ್ ಕೋರಿದರು.

ದೊಡ್ಡ ಸಂಖ್ಯೆಯಲ್ಲಿ ಸಾರ್ವಜನಿಕರು, ಸ್ಥಳೀಯ ಮುಖಂಡರು ಪಾಲ್ಗೊಂಡಿದ್ದರು.

## ಅಪರಿಚಿತ ವ್ಯಕ್ತಿ ಮೃತ

ಬೆಳಗಾವಿ: ಬೆಳಗಾವಿಯ ಬಿಮ್ಸ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗದ ಮುಂದೆ ಕಂಪೌಂಡ ಹತ್ತಿರ ಮೇ.3 2021 ರಂದು ಬೆಳಿಗ್ಗೆ 11.20 ಗಂಟೆಗೆ 60 ವರ್ಷ ವಯಸ್ಸಿನ ವ್ಯಕ್ತಿ ಪ್ರಜ್ಞೆ ತಪ್ಪಿದ ಸ್ಥಿತಿಯಲಿ ದೊರೆತಿದ್ದು ಇವರನ್ನು ಬಿಮ್ಸ ಆಸ್ಪತ್ರೆಗೆ ದಾಖಲಿಸಲಾಗಿತ್ತು, ತದನಂತರ ವ್ಯಕ್ತಿಯು ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾನೆ.

ವ್ಯಕ್ತಿಯ ಚಹರೆ ಪಟ್ಟಿ : ಎತ್ತರ: 5.6, ಗೋಧಿಗೆಂಪು ಮೈಬಣ್ಣ, ದಪ್ಪ ಮೂಗು, ಬಿಳಿ ಕಪ್ಪು ತಲೆ ಕೂದಲು ಅರ್ಧ ಬೋಳು ತಲೆ ಹಾಗೂ ಮುಖದಲ್ಲಿ ಸಣ್ಣ ದಾಡಿ ಮತ್ತು ಸಣ್ಣ ಮೀಸೆ ಇದ್ದು ನೀಲಿ, ಬಿಳಿ ಬಣ್ಣದ ಫುಲ್ ತೋಳಿನ ಟೀ ಶರ್ಟ ಹಾಗೂ ಕಪ್ಪು ಬಣ್ಣದ ಪ್ಯಾಂಟ ಧ–ರಿಸಿರುತ್ತಾರೆ.

ಈ ರೀತಿ ಚಹರೆಯುಳ್ಳ ವ್ಯಕ್ತಿಯ ಬಗ್ಗೆ ಮಾಹಿತಿ ದೊರೆತಲ್ಲಿ ಪೊಲೀಸ್ ಇನ್ಸಪೆಕ್ಟರ್ ಎ.ಪಿ.ಎಮ್.ಸಿ ಪೊಲೀಸ ಠಾಣೆ ಬೆಳಗಾವಿ ಹಾಗೂ ಎ.ಪಿ.ಎಮ್.ಸಿ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ: (0831) 2405250. ಮೋಬೈಲ್ ನಂ: 9480804106 & 9480804047 ಗೆ ಸಂಪರ್ಕಿಸಬಹುದು ಎಂದು ಠಾಣಾಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹುಬ್ಬಳ್ಳಿಯ ಆಕಾಶ್ ಬೈಜೂಸ್ 3 ವಿದ್ಯಾರ್ಥಿಗಳು ಜೆಇಇ ಸಾಧನೆ



ಹುಬ್ಬಳ್ಳಿ : ಹುಬ್ಬಳ್ಳಿಯ ಆಕಾಶ್ ಬೈಜೂಸ್ ನ ಮೂವರು ವಿದ್ಯಾರ್ಥಿಗಳು ಜಂಟಿ ಪ್ರವೇಶ ಪರೀಕ್ಷೆ (ಜೆಇಇ) ಮುಖ್ಯ 2023 ರಲ್ಲಿ ಒಟ್ಟಾರೆ 99 ಶೇಕಡಾ ಮತ್ತು ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಗಳಿಸಿ ಅವರ ಪೋಷಕರು ಮತ್ತು ಸಂಸ್ಥೆಯ ಗೌರವವನ್ನು ಹೆಚ್ಚಿಸಿದ್ದಾರೆ. ಫಲಿತಾಂಶಗಳನ್ನು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು ಏಪ್ರಿಲ್ 28, 2023 ರಂದು ಪ್ರಕಟಿಸಿತು.

ಆದರ್ಶ ಎ ತಿಪ್ರಾಡಿ 99.70, ಶಿವೇಗುಟ್ಟಲ್ 99.53 ಮತ್ತು ವೈಭವ್ ಜೆ ವಿ 99.43 ಅಂಕಗಳನ್ನು ಗಳಿಸಿ ಗಮನಾರ್ಹ ಸಾಧನೆ ಮಾಡಿದ್ದಾರೆ.

ಐಐಟಿ – ಜೆಇಇ ಅನ್ನು ಎದುರಿಸಲು ಆಕಾಶ್ ಬೈಜೂಸ್ ಸೇರಿಕೊಂಡರು. ಅವರು ಜೆಇಇ ಯಲ್ಲಿನ ಅತೀ ಹೆಚ್ಚಿನ ಶೇಕಡಾ ಗಳಿಸಿ ಸಾಧನೆ ಮಾಡುವುದಕ್ಕೆ ಅವರ ಕಲಿಕೆಯ ಜೊತೆಗೆ ಕಟ್ಟುನಿಟ್ಟಾದ ವೇಳಾಪಟ್ಟಿಯನ್ನು ಅನುಸರಿಸಲು ಆಕಾಶ್ ಬೈಜೂಸ್ ಸಹಾಯ ಮಾಡಿದೆ.

ಆಕಾಶ್ ಬೈಜೂಸ್ ನಮಗೆ ಕಲಿಕೆಯಲ್ಲಿ ಸಹಾಯ ಮಾಡಿದ್ದಕ್ಕಾಗಿ ನಾನು ಕೃತಜ್ಞರಾಗಿದ್ದೇವೆ. ಆದರೆ ಕಡಿಮೆ ಸಮಯವಿದ್ದರಿಂದ ಇನ್ನು ಅನೇಕ ವಿಷಯಗಳನ್ನು ಗ್ರಹಿಸಲು ನಮ್ಮಿಂದ ಆಗಲಿಲ್ಲ. ಇನ್ನೂ ಹೆಚ್ಚಿನದನ್ನು ಕಲಿಯುವುದಕ್ಕೆ ಇಲ್ಲಿ ಅವಕಾಶವಿದೆ ಎಂದು ಹೇಳಿದರು.

ಆಕಾಶ್ ಬೈಜೂಸ್ ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಭಿಷೇಕ್ ಮಹೇಶ್ವರಿ, ಮಾದರಿ ಸಾಧನೆಗಾಗಿ ನಾವು ಎಲ್ಲಾ ವಿದ್ಯಾರ್ಥಿಗಳನ್ನು ಅಭಿನಂದಿಸುತ್ತೇವೆ. ಟಾಪ್ ಪರ್ಸೆಂಟೈಲ್ ಸ್ಕೋರರ್ ಆಗಿ ಅವರ ಸಾಧನೆ ಅವರ ಕಠಿಣ ಪರಿಶ್ರಮ ಇದರ ಮೂಲಕ ತಿಳಿಯುತ್ತದೆ. ಅವರ ಮುಂದಿನ ಪ್ರಯತ್ನಗಳಿಗೆ ನಾವು ಶುಭ ಹಾರೈಸುತ್ತೇವೆ ಎಂದರು.

ಜೆಇಇ (ಮುಖ್ಯ) ವಿದ್ಯಾರ್ಥಿಗಳು ತಮ್ಮ ಅಂಕಗಳನ್ನು ಸುಧಾರಿಸಲು ಅನೇಕ ಅವಕಾಶಗಳನ್ನು ನೀಡಲು ಎರಡು ಅವಧಿಗಳಲ್ಲಿ ನಡೆಸಲಾಗುತ್ತದೆ. ಜೆಇಇ ಅಡ್ವಾನ್ಸ್ ಡ್ ಭಾರತೀಯ ತಂತ್ರಜ್ಞಾನ ಸಂಸ್ಥೆಗಳಿಗೆ (ಐಐಟಿ) ಪ್ರವೇಶಕ್ಕಾಗಿ ಮಾತ್ರ, ಜೆಇಇ ಮೇನ್ ಹಲವಾರು ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜೀಸ್ (ಎನ್ಐಟಿ) ಮತ್ತು ಭಾರತದಲ್ಲಿನ ಇತರ ಕೇಂದ್ರ–ಸಹಾಯದ ಎಂಜಿನಿಯರಿಂಗ್ ಕಾಲೇಜುಗಳಿಗೆ ಪ್ರವೇಶವಾಗಿದೆ.

ಜೆಇಇ ಅಡ್ವಾನ್ಸ್ಡ್ ಗೆ ಕುಳಿತುಕೊಳ್ಳಲು ವಿದ್ಯಾರ್ಥಿಗಳು ಜೆಇಇ ಮೇನ್ಸ್ ಗೆ ಹಾಜರಾಗಬೇಕು.

ಆಕಾಶ್ ಬೈಜೂಸ್ ಹೈಸ್ಕೂಲ್ ಮತ್ತು ಹೈಯರ್ ಸೆಕೆಂಡರಿ ಶಾಲಾ ವಿದ್ಯಾರ್ಥಿಗಳಿಗೆ ಬಹು ಕೋರ್ಸ್ ಸ್ವರೂಪಗಳಲ್ಲಿ ಐಐಟಿ–ಜೆಇಇ ಕೋಚಿಂಗ್ ನೀಡುತ್ತದೆ. ಇತ್ತೀಚಿನ ದಿನಗಳಲ್ಲಿ, ಆಕಾಶ್ ಕಂಪ್ಯೂಟರ್ ಆಧಾರಿತ ತರಬೇತಿಯನ್ನು ಅಭಿವೃದ್ಧಿಪಡಿಸುವಲ್ಲಿ ತನ್ನ ಗಮನವನ್ನು ಹೆಚ್ಚಿಸಿದೆ.

## ಪ್ರದೀಪ ನಾಯಕ ವಿದ್ಯಾರ್ಥಿಯ ಸಾಧನೆ



ಶಿಂದಿಕುರಬೇಟ: ಸ್ಥಳೀಯ ಎಸ್.ಎಂ.ಎಸ್. ಪ್ರೌಢ ಶಾಲೆಯ ವಿದ್ಯಾರ್ಥಿ ಪ್ರದೀಪ ರವಿಚಂದ್ರ ನಾಯಕ ಈತನು 2022–23ನೇ ಸಾಲಿನ ಎನ್.ಎಂ.ಎಂ.ಎಸ್. ಪರೀಕ್ಷೆಯಲ್ಲಿ ಪಾಸಾಗಿದ್ದಾನೆ.

ರಾಷ್ಟ್ರೀಯ ಪ್ರತಿಭಾನ್ವೇಷಣೆಯು 4 ವರ್ಷ ನೀಡುವ ಸ್ಕಾಲರ್ಶಿಪ್ ಗೆ ಈತ ಅರ್ಹನಾಗಿದ್ದಾನೆ. ಈತನ ಸಾಧನೆಗೆ ಎಸ್.ಡಿ.ಎಂ.ಸಿ. ಅಧ್ಯಕ್ಷ ಜೋತೆಪ್ಪ ಬಂತಿ, ಮುಖ್ಯಾಧ್ಯಾಪಕ ಪಿ.ಎಚ್. ಗೋಸಬಾಳ ಸೇರಿದಂತೆ ಎಲ್ಲ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

## ಬಿಜೆಪಿ ಅಭ್ಯರ್ಥಿ ಬಿ.ವಿ ನಾಯಾಕ ಪರ ಬಂಡ ಕಾರ್ತಿಕ್ ರೆಡ್ಡಿ ಮಿಂಚಿನ ಪ್ರಚಾರ

ಸಿರವಾರ.. ಕರ್ನಾಟಕ ವಿಧಾನಸಭಾ ಚುನಾವಣೆ ಪ್ರಯುಕ್ತ ಸಿರವಾರ ಪಟ್ಟಣದಲ್ಲಿ ಬಿಜೆಪಿ ಅಭ್ಯರ್ಥಿ ಮಾಜಿ ಸಂಸದರಾದ ಬಿವಿ ನಾಯಕ ಅವರ ಪರವಾಗಿ ವಾರ್ಡ್ ನಂಬರ್ 14 ರಿಂದ 15 16 17 18 ಹಾಗೂ ಒಂದನೇ ವಾರ್ಡಿನಲ್ಲಿ ಹೈದರಾಬಾದ ಮಾಜಿ ಮೇಯರ್ ಹಾಗೂ ಮಾನ್ವಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಕೇಂದ್ರ ಉಸ್ತುವಾರಿ ಶ್ರೀಮತಿ ಬಂಡ ಕಾರ್ತಿಕ್ ರೆಡ್ಡಿ ಮೇಡಂ ಅವರು ಅಬ್ಬರದ ಪ್ರಚಾರ ಕೈಗೊಂಡರು ಮುಖಂಡರು ಯುವಕರು ಕಾರ್ಯಕರ್ತರು



ಮನೆ ಮನೆಗೆ ತೆರಳಿ ಬಿಜೆಪಿಗೆ ಮತ ಹಾಕಿ ಹಾಕಿಸಿ ಎಂದು ಕೇಳಿದರು ಈ ಸಂದರ್ಭದಲ್ಲಿ ಜೆ ದೇವರಾಜಗೌಡ, ಕೃಷ್ಣ ನಾಯಕ, ಅಜಿತ್ ಕುಮಾರ ಹೊನ್ನಟಗಿ, ಜೆ ಶಿವರಾಂ ರೆಡ್ಡಿ, ಬಸವರಾಜ ಪಾಟೀಲ್, ಉಮೇಶ್ ಜಗರ್ಕಲ್, ಎಚ್ ಕೆ ಶಿವಗೆನಿ ನರಸಿಂಹರಾವ್ ಕುಲಕರ್ಣಿ, ಎಚ್ ಕೆ ಅಮರೇಶ್, ಚನ್ನೂರು ಚೆನ್ನಪ್ಪ, ಡೇವಿಡ್, ರಾಜು ನಾಯಕ್, ರವಿ ನಾಯಕ, ರಮೇಶ್ ಶೆಟ್ಟಿ, ಮಲ್ಲು ನಾಯಕ್, ಎಚ್ ಕೆ ಕರಿಯಪ್ಪ, ವಿನಯ್ ಕುಮಾರ್, ಎಚ್ ಕೆ ಚನ್ನಬಸವ, ಹಾಗೂ ಅನೇಕ ಬಿಜೆಪಿ ಮುಖಂಡರು ಯುವಕರು ಕಾರ್ಯಕರ್ತರು ಭಾಗವಹಿಸಿದ್ದರು.


## ಮೈಕ್ರೋಬಯೋಮ್ ಟೆಸ್ಟಿಂಗ್ ಕಿಟ್ ಪರಿಚಯಿಸಿದ ಗ್ಯಾಸ್ಟ್ರೋ ಸೆಂಟರ್

ಬೆಂಗಳೂರು: ಎಲ್ಲ ಜೀರ್ಣ ಸಂಬಂಧಿತ ಅಸ್ವಸ್ಥತೆಗಳಿಗೆ ಉತ್ತಮ ಗುಣಮಟ್ಟದ ತಜ್ಞರ ಆರೈಕೆಯಲ್ಲಿ ಆದ್ಯ ಪ್ರವರ್ತಕ ರಾಗಿರುವ ಬೆಂಗಳೂರು ಗ್ಯಾಸ್ಟ್ರೋ ಸೆಂಟರ್ (ಬಿಜಿಸಿ), ಭಾರತದಲ್ಲಿ ರೋಗನಿರ್ಣಯದ ಅನುಭವ ಪರಿವರ್ತಿಸುವುದಕ್ಕಾಗಿ ಇಂದು ಬಯೋಡೇಟಾ ಹಾಗೂ ಕೃತಕ ಬುದ್ಧಿವಂತಿಕೆ ತಂತ್ರಜ್ಞಾನ ನಿರ್ವಹಣೆಯಲ್ಲಿ ಜಾಗತಿಕ ಆರೋಗ್ಯ ರಕ್ಷಣೆಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ದಕ್ಷಿಣ ಕೊರಿಯಾದ 3ಬಿಗ್ಸ್‌ಜೊತೆಗೆ ಪರಸ್ಪರ ತಿಳುವಳಿಕೆ ಒಪ್ಪಂದಕ್ಕೆ (ಎಂಒಯು) ಸಹಿ ಹಾಕಿದೆ. ಬೆಂಗಳೂರು ಗ್ಯಾಸ್ಟ್ರೋ ಸೆಂಟ–ರ್‌ನ ನಿರ್ದೇಶಕ ಮತ್ತು ಮುಖ್ಯಗ್ಯಾಸ್ಟ್ರೋ ಎಂಟರಾಲಜಿಸ್ಟ್ (ಪಚನಾಂಗ ರೋಗ ಶಾಸ್ತ್ರತಜ್ಞ) ಡಾ. ಯೋಗಾನಂದ ರೆಡ್ಡಿ ಮತ್ತು 3ಬಿಗ್ಸ್ ಸಂಸ್ಥಾಪಕ ಮತ್ತು ಸಿಇಒ ಡಾ. ಜುನ್‌ಹ್ಯೂಂಗ್ ಪಾರ್ಕ್‌ಅವರ ಹಾಜರಿಯಲ್ಲಿ ಒಪ್ಪಂದ ಮಾಡಿಕೊಳ್ಳಲಾಯಿತು.

ಮಾದರಿಗಳನ್ನು ಸಂಗ್ರಹಿಸುವುದ–ರಿಂದ ಹಿಡಿದುಸರಿಯಾದ ವೈದ್ಯಕೀಯ ಬೆಂಬಲವನ್ನುಒದಗಿಸಲು ಪೌಷ್ಟಿಕತಜ್ಞ/ವೈದ್ಯರನ್ನು ಶಿಫಾರಸು ಮಾಡುವವರೆಗಿನ ಆದಿಯಿಂದ ಅಂತ್ಯದವರೆಗಿನ ಒದಗಿಸುವ ಗುರಿಯನ್ನು ಈ ಸಹಭಾಗಿತ್ವ ಹೊಂದಿದೆ.

ಭಾರತದಲ್ಲಿ ಈ ಸೇವೆಯನ್ನು ಸ್ಥಾಪಿಸಿದ ಮೊದಲ ಆಸ್ಪತ್ರೆ ಬೆಂಗಳೂರು ಗ್ಯಾಸ್ಟ್ರೋ ಸೆಂಟರ್ (ಬಿಜಿಸಿ) ಆಗಿದೆ. ಈ ಸಹಭಾಗಿ–ತ್ವಬೆಂಗಳೂರು ಗ್ಯಾಸ್ಟ್ರೋ ಸೆಂಟರ್‌ನ ವೈದ್ಯ–ರಿಗೆ ನಿಖರವಾದ ಫಲಿತಾಂಶಗಳನ್ನು ಒದಗಿಸುವುದಕ್ಕೆ ಸಹಾಯ ಮಾಡುವುದಕ್ಕಾಗಿ ಕರುಳಿನ ಮೈಕ್ರೋಬಯೋಮ್ ಪರೀಕ್ಷಾಕಿಟ್ ಅನ್ನು ಅಭಿವೃದ್ಧಿಪಡಿಸಲು ಸಂಪರ್ಕ ನೀಡುತ್ತದೆ. ಈ ಕಿಟ್ ರೋಗಿಗಳಿಗೆ ಮತ್ತು ಹೆಚ್ಚಿನಜನರಿಗೆ ಶೀಘ್ರದಲ್ಲೇ ಲಭ್ಯವಾಗಬಹುದು.

ಭವಿಷ್ಯದಲ್ಲಿ ಕೃತಕ ಬುದ್ಧಿವಂತಿಕೆ(–ಎಐ), ಜೆನೋಮ್ ಸೀಕ್ವೆನ್ಸಿಂಗ್, ಡಾಟಾ ಮೈನಿಂಗ್‌ಅನ್ನು ಅಳವಡಿಸಲು ಮತ್ತು ಫಲಿತಾಂಶಗಳನ್ನು ಶೀಘ್ರವಾಗಿ ಸಾಧಿಸಲು ವಿವಿಧತಂತ್ರಜ್ಞಾನ ಮತ್ತು ಉತ್ಪನ್ನಗಳನ್ನು



ಅಭಿವೃದ್ಧಿಪಡಿಸುವ ಗುರಿಯನ್ನು ಈ ಸಹಭಾಗಿತ್ವ ಹೊಂದಿದೆ.

ಭಾರತದಲ್ಲಿ ಪ್ರಸ್ತುತ ಜೀರ್ಣ ಸಂಬಂಧಿತ ಅಸ್ವಸ್ಥತೆಗಳಿಗೆ ನಿಖರ ಫಲಿತಾಂಶ ಪಡೆಯುವುದಕ್ಕೆ, ಸಂಪರ್ಕದ ಕೊರತೆ, ನಿಯಮಿತ ಸಂಶೋಧನಾ ಪ್ರಯೋಗಾಲಯಗಳು, ಹೆಚ್ಚಿನ ಬೆಲೆಯ ಪರೀಕ್ಷಾ ಕಿಟ್‌ಗಳು ಮತ್ತು ಸಮಯ ತೆಗೆದುಕೊಳ್ಳುವ ವಿಧಾನಗಳುಅಡ್ಡಿಯಾಗಿವೆ. ಈ ಹೊಸ ಗಟ್ ಮೈಕ್ರೋಬಯೋಮ್ ಟೆಸ್ಟ್‌ಕಿಟ್, ನವೀನ ಮತ್ತು ಭವಿಷ್ಯದ ಆರೋಗ್ಯ ಆರೈಕೆಯ ಆಯ್ಕೆಯನ್ನು ಭಾರತದ ಜನರಿಗೆ ಸಾದರಪಡಿಸುತ್ತಿದೆ.

ಬೆಂಗಳೂರು ಗ್ಯಾಸ್ಟ್ರೋ ಸೆಂಟರ್‌ನ ನಿರ್ದೇಶಕರು ಮತ್ತು ಮುಖ್ಯ ಪಚನಾಂಗ ರೋಗ ಶಾಸ್ತ್ರ ತಜ್ಞರಾದ ಡಾ.ಯೋಗಾನಂದರೆಡ್ಡಿ ಅವರು ಮಾತನಾಡಿ, "ಡಾಟಾ ಮೈನಿಂಗ್‌ನಲ್ಲಿ ಆದ್ಯಪ್ರವರ್ತಕರು ಮತ್ತುಎಐ ಮತ್ತು ಬಯೋಇನ್ ಫರ್ಮ್ಯಾಟಿಕ್ಸ್‌ನಲ್ಲಿ ಪರಿಣತರಾದ 3ಬಿಗ್ಸ್ ನೊಂದಿಗೆ ಸಹಕರಿಸುವುದು ನಮಗೆ ಮಹಾನ್ ಗೌರವವಾಗಿದೆ. ದಕ್ಷಿಣ ಕೊ–ರಿಯಾದ ಸಂಸ್ಥೆಯು ಮೊದಲ ಬಾರಿಗೆಜನರ ಅನುಕೂಲಕ್ಕಾಗಿ ಕರುಳಿನ ಮೈಕ್ರೋಬ್‌ಟೆಕ್ ಟೆಸ್ಟಿಂಗ್ ಕಿಟ್‌ಅನ್ನು ಅಭಿವೃದ್ಧಿಪಡಿಸಲು ಭಾರತೀಯ ಆಸ್ಪತ್ರೆಯೊಂದಿಗೆ ಸಹಭಾಗಿತ್ವ ಕೈಗೊಳ್ಳುತ್ತಿದೆ ಎಂದರು.

3ಬಿಗ್ಸ್‌ನ ಸ್ಥಾಪಕರು ಮತ್ತು ಮುಖ್ಯ ಕಾರ್ಯನಿವಾಹಕ ಅಧಿಕಾರಿಡಾ. ಜುನ್‌ಹ್ಯುಂಗ್ ಪಾರ್ಕ್ ಅವರು ಮಾತನಾಡಿ, "ಬೆಂಗಳೂರು ಗ್ಯಾಸ್ಟ್ರೊ ಸೆಂಟರ್‌ನೊಂದಿಗೆ ಸಹಭಾಗಿತ್ವ ಕೈಗೊಳ್ಳುವುದು ನಮಗೆ ವಿಶೇಷ ಸವಲತ್ತಿನ ವಿಷಯವಾಗಿದೆ. ಏಕೆಂದರೆ ಈ ಸಂಸ್ಥೆ ಭಾರತದಲ್ಲಿ ವಿಶ್ವದರ್ಜೆಯ ಜೀರ್ಣಕಾರ್ಯ ಸಂಬಂಧಿತ ಆರೋಗ್ಯ ಸೌಲಭ್ಯಗಳನ್ನು ಪೂರೈಸುವಲ್ಲಿ ಅತ್ಯುತ್ತಮ ಎನಿಸಿದೆ ಎಂದರು.

3ಬಿಗ್ಸ್ ತಂತ್ರಜ್ಞಾನದ ಸಹಾಯದಿಂದ ಬೃಹತ್ ಡೇಟಾಬೇಸ್ ರಚಿಸಲು ಬೆಂಗಳೂರು ಗ್ಯಾಸ್ಟ್ರೋ ಸೆಂಟರ್‌ಗೆ(ಬಿಜಿಸಿ) ಟೆಸ್ಟಿಂಗ್ ಕಿಟ್‌ನ ಬಿಡುಗಡೆ ಸಹಾಯ ಮಾಡುತ್ತದೆ. ಒಮ್ಮೆ ಈ ಸಹಭಾಗಿತ್ವ ಯಶಸ್ವಿಯಾದಲ್ಲಿ, ಆಸ್ಪತ್ರೆಯು ಭಾರತದಲ್ಲಿ ರೋಗನಿರ್ಣಯ ವಿಧಾನಗಳಿಗೆ ಹೆಚ್ಚಿನ ಚಾಲನೆ ನೀಡುವ ಹೆಚ್ಚಿನಸಂಖ್ಯೆಯ ಉತ್ಪನ್ನಗಳನ್ನು ತರಲಿದೆ.

BELAGAVI VARADI KANNADA DAILY MORNING : Editor, Printer, Publisher & Owned By : **Satish Basavani Gudagenatti,** Basavani House No.53, Ashray Colony, Sarathi Nagar, Tv Center - 590019, TQ & DIST Belagavi, Karnataka.
Printed At : LAXMI PRINTERS, No.627. Auto Nagar - 590016.TQ & DIST Belagavi, Karnataka Mob : 9900332089